sochara
building community health

# ಸಮುದಾಯ ಆರೋಗ್ಯ ಮತ್ತು ಪರಿಸರ ಸ್ವಚ್ಛತೆ ತರಬೇತಿ ಕೈಪಿಡಿ









**SOCHARA**

**Society for Community Health Awareness Research and Action**

**2013**



ಕೋಲಾರ ಜಿಲ್ಲೆ ಎಡೆಹಳ್ಳಿ ಗ್ರಾಮದಲ್ಲಿ, ಗಾರೆ ಕೆಲಸಗಾರರ ತರಬೇತಿ
ದಿನಾಂಕ 2.10.2013



ಬೂದಿಹಾಳ ಗ್ರಾಮ, ಬಾದಾಮಿ ತಾಲ್ಲೂಕು ಗಾರೆ ಕೆಲಸಗಾರರ
ತರಬೇತಿ ದಿನಾಂಕ :- 13.06.2010 ರಿಂದ 14.06.2010

### ಸಂಚಿಕೆ ರೂಪಿಸಿದವರು

- ಶ್ರೀ.ಪ್ರಹ್ಲಾದ್.ಐ.ಎಂ – **SOCHARA**

### ಮಾರ್ಗದರ್ಶನ

- ಡಾ. ರವಿ ನಾರಾಯಣ್ – **SOCHARA**
- ಡಾ. ಥೆಲ್ಮಾ ನಾರಾಯಣ್ – **SOCHARA**
- ಶ್ರೀ.ಎ.ಎಸ್.ಮೋಹಮ್ಮದ್ – **SOCHARA**
- ಶ್ರೀ.ಪ್ರಸನ್ನ ಸಾಲಿಗ್ರಾಮ್ – **SOCHARA**

### ಸಂಚಿಕೆ ರೂಪಿಸಲು ಸಹಾಯ

- ಡಾ.ಪ್ರಕಾಶ್ ರಾವ್ – ಅಧ್ಯಕ್ಷರು, ಕನ್ನಡ ವೈದ್ಯ ಸಾಹಿತ್ಯ ಪರಿಷತ್ತ ಬೆಂಗಳೂರು ಸಂಸ್ಥೆ, ಬೆಂಗಳೂರು
- ಶ್ರೀಮತಿ. ಶಾರದಾ ಗೋಪಾಲ – ಜಾಗೃತಿ ಸಂಸ್ಥೆ, ಧಾರವಾಡ
- ಡಾ.ಭಾಗ್ಯಲಕ್ಷ್ಮಿ – ಸಖೀ ಸಂಸ್ಥೆ, ಹೋಸಪೇಟೆ, ಬಳ್ಳಾರಿ
- ಶ್ರೀಮತಿ.ಸ್ವರ್ಣಭಟ್ – ಹೆಡ್‌ಸ್ಟ್ರೀಮ್ಸ್ ಸಂಸ್ಥೆ, ಬಾದಾಮಿ
- ಶ್ರೀ.ಭೀಮ್‌ರಾಜ್ – ಸಮುದಾಯ ಆರೋಗ್ಯ ಕೋಶ , ಬೆಂಗಳೂರು
- ಕು. ಶಾಂತಿ ಡಿ ಸೋಜ – ಸಮುದಾಯ ಆರೋಗ್ಯ ಕೋಶ ಬೆಂಗಳೂರು
- **SOCHARA** – ಸಂಸ್ಥೆಯ ಸಿಬ್ಬಂಧಿ ವರ್ಗ

**Courtesy** : KZE-MISEREOR, GERMANY - 2010 to 2013

# ಪರಿವಿಡಿ


| | | |
|---|---|---|
| 1. | ಮುನ್ನುಡಿ | 2 |
| 2. | SOCHARA ಸಂಸ್ಥೆಯ ಬಗ್ಗೆ | 3 |
| 3. | ಪೀಠಿಕೆ | 4 |
| 4. | ಕೈಪಿಡಿಯ ಕುರಿತು | 5 |
| 5. | ಕೈಪಿಡಿಯ ಉದ್ದೇಶ | 5 |
| 6. | ನಿರ್ಮಲ ಭಾರತ ಅಭಿಯಾನ | 6–7 |
| 7. | ಸಮುದಾಯ ಆಧಾರಿತ ಸಂಪೂರ್ಣ ಸ್ವಚ್ಛತೆ | 8–11 |
| 8. | ಕಡಿಮೆ ವೆಚ್ಚದ ಶೌಚಾಲಯ | 12–17 |
| 9. | ಪರಿಸರ ಸ್ನೇಹಿ ಶೌಚಾಲಯ | 18–19 |
| 10. | ತ್ಯಾಜ್ಯ ವಸ್ತುಗಳ ನಿರ್ವಹಣೆ | 20–23 |
| 11. | ಆಧಾರ ಗ್ರಂಥ | 24 |

# ಮುನ್ನುಡಿ

ಸಾರ್ವಜನಿಕ ಆರೋಗ್ಯವು ಹಲವಾರು ದೃಷ್ಟಿಕೋನವನ್ನು ಹೊಂದಿದೆ. ಕಳೆದ ಕೆಲವು ವರ್ಷಗಳಿಂದ ಬಹಳಷ್ಟು ಜನರು ಸಮುದಾಯ ಆರೋಗ್ಯ ಮತ್ತು ಸಾರ್ವಜನಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ ಕಾರ್ಯನಿರ್ವಹಿಸುತ್ತಿದ್ದಾರೆ, ಆದರೆ ಪರಿಸರ ಸ್ವಚ್ಛತೆ ಮಾತ್ರ ತೀರ ನಿರ್ಲಕ್ಷ್ಯಕ್ಕೆ ಒಳಗಾಗಿರುವ ವಿಷಯವಾಗಿದೆ. ಉತ್ತಮವಾದ ಕುಡಿಯುವ ನೀರು ಮತ್ತು ನೈರ್ಮಲ್ಯದ ವ್ಯವಸ್ಥೆ ಇದ್ದಲ್ಲಿ ಹಲವಾರು ಕಾಯಿಲೆಗಳನ್ನು ತಡೆಗಟ್ಟಬಹುದು ಹಾಗೂ ಸಮುದಾಯವು ಎದುರಿಸುತ್ತಿರುವಂತಹ ಸಾಮಾಜಿಕ, ಮಾನಸಿಕ ಹಾಗೂ ಪರಿಸರಾತ್ಮಕವಾದ ಸಮಸ್ಯೆಗಳನ್ನು ತಡೆಗಟ್ಟಬಹುದಾಗಿದೆ. SOCHARA ಸಂಸ್ಥೆಯು ಈ ಕೈಪಿಡಿಯನ್ನು ಪರಿಸರ ಸ್ವಚ್ಛತೆ ಬಗ್ಗೆ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳ ಕಾರ್ಯಕರ್ತರು, ಚುನಾಯಿತ ಪ್ರತಿನಿಧಿಗಳ, ಗ್ರಾಮೀಣ ವಿಭಾಗದ ಸಮುದಾಯ, ಶಾಲಾ ಮಕ್ಕಳ ಹಾಗೂ ಸಾರ್ವಜನಿಕರ ಉಪಯೋಗಕ್ಕಾಗಿ ಬಿಡುಗಡೆ ಮಾಡುತ್ತಿದೆ. ಸಂಸ್ಥೆಯು ಕಳೆದ 28 ವರ್ಷಗಳಿಂದ "ಸರ್ವರಿಗೂ ಆರೋಗ್ಯ" ಎಂಬ ಗುರಿಯನ್ನು ಸಾಧಿಸುವ ಸಲುವಾಗಿ ಕಾರ್ಯನಿರ್ವಹಿಸುತ್ತಿದೆ. ಈ ಕೈಪಿಡಿಯನ್ನು ಶ್ರೀ.ಪ್ರಹ್ಲಾದ್.ಐ.ಎಂ SOCHARA ರವರು ತಯಾರಿಸಿರುತ್ತಾರೆ. ಶ್ರೀ ಪ್ರಹ್ಲಾದ್‌ರವರು 2006 ರಲ್ಲಿ ಪರಿಸರ ವಿಜ್ಞಾನದಲ್ಲಿ ಪದವಿ ಪಡೆದ ನಂತರ ಕಳೆದ ಸುಮಾರು 6 ವರ್ಷಗಳಿಂದ "ಪರಿಸರ ಸ್ವಚ್ಛತೆ" ಬಗ್ಗೆ ಕೆಲಸ ನಿರ್ವಹಿಸುತ್ತಿರುತ್ತಾರೆ. ಅವರು ಕರ್ನಾಟಕ ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಕಾರ್ಯಕರ್ತರು, ಚುನಾಯಿತ ಪ್ರತಿನಿಧಿಗಳು, ಸ್ವಯಂ ಸೇವಕರು, ಶಿಕ್ಷಕರು, ಗ್ರಾಮೀಣ ಸಮುದಾಯ ಹಾಗೂ ಇತರರಿಗೆ "ಪರಿಸರ ಸ್ವಚ್ಛತೆ" ಕುರಿತು ತರಬೇತಿಯನ್ನು ಹಮ್ಮಿಕೊಂಡು ರಾಜ್ಯದ ಗ್ರಾಮೀಣ ಪ್ರದೇಶಗಳನ್ನು ಬಯಲು ಮಲ ವಿಸರ್ಜನೆ ಮುಕ್ತ ಪ್ರದೇಶವನ್ನಾಗಿಸುವತ್ತಾ ಶ್ರಮಿಸುತ್ತಿದ್ದಾರೆ. ಈ ಕೈಪಿಡಿಯನ್ನು ಸಮುದಾಯ ಸೇರಿದಂತೆ ಎಲ್ಲರೂ ಉಪಯೋಗಿಸಿಕೊಂಡು ಗ್ರಾಮೀಣ ಸಮುದಾಯಕ್ಕೆ ಪರಿಸರದ ಮಹತ್ವ ಬಗ್ಗೆ ಅರಿವು ಮೂಡಿಸುವತ್ತಾ ಶ್ರಮಿಸಲು ಕೈ ಜೋಡಿಸುವ ಅವಶ್ಯಕತೆ ಇದೆ.

**ಡಾ.ಥೆಲ್ಮಾ ನಾರಾಯಣ್**
ಕಾರ್ಯದರ್ಶಿಗಳು,
SOCHARA ಸಂಸ್ಥೆ, ಬೆಂಗಳೂರು.
ಮಾರ್ಚ್ 2013

# SOCHARA

## Society for Community Health Awareness Research and Action

SOCHARA ಸಂಸ್ಥೆಯು 1984 ರಲ್ಲಿ ಸಮುದಾಯ ಆರೋಗ್ಯ ಕೋಶ ಎಂಬ ಹೆಸರಿನಲ್ಲಿ ಪ್ರಾರಂಭವಾಗಿದೆ. ನಂತರ 1991 ರಲ್ಲಿ ಸಂಸ್ಥೆಯನ್ನು SOCHARA ಎಂದು ನಾಮಕರಣ ಮಾಡಿ ಸಮುದಾಯ ಮತ್ತು ಸಾರ್ವಜನಿಕ ಆರೋಗ್ಯದ ಕ್ಷೇತ್ರದಲ್ಲಿನ "ಸರ್ವರಿಗೂ ಆರೋಗ್ಯ" ಎಂಬ ಗುರಿಯನ್ನು ಸಾಧಿಸಲು ಶ್ರಮಿಸುತ್ತಿದೆ. ಸಂಸ್ಥೆಯು ದೇಶದ 3 ರಾಜ್ಯಗಳಲ್ಲಿ ತನ್ನ ಘಟಕಗಳನ್ನು ಹೊಂದಿದೆ. ಬೆಂಗಳೂರಿನಲ್ಲಿ **Community Health Cell (CHC- SOCHARA) & Center for Public Health and Equity (CPHE)**, ಮಧ್ಯಪ್ರದೇಶದಲ್ಲಿ **Center for Public Health and Equity (CPHE - Bhopal)** ಹಾಗೂ ತಮಿಳುನಾಡಿನ ಚೆನ್ನೈಯಲ್ಲಿ **CHC Extension unit** ಎಂಬ ಹೆಸರಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ಸಂಸ್ಥೆಯು ಸಾರ್ವಜನಿಕ ಆರೋಗ್ಯ ಹಾಗೂ ಸಮುದಾಯ ಆರೋಗ್ಯಕ್ಕೆ ಸಂಬಂಧಪಟ್ಟಂತೆ ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು "ಪರಿಸರ ಸ್ವಚ್ಛತೆ " ಕೂಡ ಸಂಸ್ಥೆಯ ಮಹತ್ವಾಕಾಂಕ್ಷೆಯ ಕೆಲಸವಾಗಿದೆ. ಸಂಸ್ಥೆಯ ಪರಿಸರ ಸ್ವಚ್ಚತೆ ಕೆಲಸದ ಉದ್ದೇಶವು **"ಪರಿಸರ ಸ್ವಚ್ಛತೆಯ ಮುಖಾಂತರ ಮಹಿಳೆ ಮತ್ತು ಮಕ್ಕಳ ಆರೋಗ್ಯ ಸುಧಾರಣೆ"** ಆಗಿದೆ. ಸಂಸ್ಥೆಯು **"ಸರ್ವರಿಗೂ ಆರೋಗ್ಯ"** ಎಂಬ ಗುರಿಯನ್ನು ಸಾಧಿಸುವ ಸಲುವಾಗಿ ರಾಜ್ಯ ಮಟ್ಟದ ಹಾಗೂ ಜಿಲ್ಲಾ ಮಟ್ಟದ ಹಲವಾರು ಸ್ವಯಂ ಸೇವಾ ಸಂಘ ಸಂಸ್ಥೆಗಳು, ಪಂಚಾಯತಿ ರಾಜ್ ವ್ಯವಸ್ಥೆ, ಶಾಲೆ, ಅಂಗನವಾಡಿ ಹಾಗೂ ಆರೋಗ್ಯಕ್ಕೆ ಸಂಬಂಧ ಪಟ್ಟ ಕೆಲಸ ನಿರ್ವಹಿಸುತ್ತಿರುವವರೊಂದಿಗೆ ಕೆಲಸ ಮಾಡುತ್ತಿದೆ.


### ಸಂಸ್ಥೆಯ ಉದ್ದೇಶ

- ಆರೋಗ್ಯ ಕ್ಷೇತ್ರದಲ್ಲಿ ಆಸಕ್ತಿ ಹೊಂದಿರುವವರಿಗೆ ಸಮುದಾಯ ಆರೋಗ್ಯದ ಅಭ್ಯಾಸಗಳು ಹಾಗೂ ಮೂಲತತ್ವದ ಬಗ್ಗೆ ಅರಿವು ಮೂಡಿಸುವಂತಹ ಕಾರ್ಯ ಮಾಡುವುದು.
- ಸರಕಾರಿ ಹಾಗೂ ಸ್ವಯಂ ಸೇವಾ ಪ್ರವೃತ್ತಿಯ ಮುಖಾಂತರ "ಸಮುದಾಯ ಆರೋಗ್ಯ" ಕ್ಕೆ ಉತ್ತೇಜನ ಹಾಗೂ ಬೆಂಬಲ ನೀಡುವುದು.
- ಸಮುದಾಯ ಆರೋಗ್ಯ ಪಾಲನೆಯ ಕುರಿತಾದ ಕಾರ್ಯತಂತ್ರ, ಆರೋಗ್ಯ ಸಂಬಂಧಿತ ತರಬೇತಿಗಳು, ಸಮುದಾಯ ಆರೋಗ್ಯ ನೀತಿಗಳು ಹಾಗೂ ಆರೋಗ್ಯಕ್ಕೆ ಸಂಬಂಧಿಸಿದಂತೆ ಇತರೆ ವಿಷಯಗಳ ಬಗ್ಗೆ ಸಂಶೋಧನೆ ಕೈಗೊಳ್ಳುವುದು.
- ಸಮುದಾಯ ಆರೋಗ್ಯಕ್ಕೆ ಮತ್ತು ಅಭಿವೃದ್ಧಿಗಾಗಿ ಕಾರ್ಯನಿರ್ವಹಿಸುತ್ತಿರುವ ಜನರಿಗೆ ಆರೋಗ್ಯ ಶಿಕ್ಷಣಕ್ಕೆ ಸಂಬಂಧಿಸಿದಂತೆ ಕಾರ್ಯತಂತ್ರ ರೂಪಿಸಿ ಸಾರ್ವಜನಿಕರು ಹಾಗೂ ಸಮುದಾಯದವರ ಸಾಮರ್ಥ್ಯವನ್ನು ವೃದ್ಧಿಸುವತ್ತ ಕಾರ್ಯನಿರ್ವಹಿಸುವುದು.
- ಆರೋಗ್ಯಕ್ಕೆ ಸಂಬಂಧಿಸಿದಂತೆ ಯೋಜನೆ ರೂಪಿಸುವವರು, ಕಾರ್ಯಕ್ರಮ ಜಾರಿಗೊಳಿಸುವವರು ಹಾಗೂ ಸಮುದಾಯದ ಜೊತೆ ಸಂವಾದ ನಡೆಸಿ ಆರೋಗ್ಯ ನೀತಿಗೆ ಸಂಬಂಧಿಸಿದಂತೆ ಕಾರ್ಯನಿರ್ವಹಿಸುವುದು.
- ಸಮುದಾಯ ಆರೋಗ್ಯ ಸಂಬಂಧಿಸಿದ ವಿಷಯಗಳ ದಾಖಲೀಕರಣ ಮತ್ತು ಸಮುದಾಯ ಆರೋಗ್ಯ ಗ್ರಂಥಾಲಯ ಅಭಿವೃದ್ಧಿ ಪಡಿಸುವುದು.

# ಅಧ್ಯಾಯ – 1

## ಪೀಠಿಕೆ

ಕೇಂದ್ರದ ಸಮೀಕ್ಷೆಯ ಪ್ರಕಾರ ರಾಜ್ಯದ ಗ್ರಾಮೀಣ ವಿಭಾಗದಲ್ಲಿ ಶೇ.71.59 ರಷ್ಟು ಕುಟುಂಬಗಳಲ್ಲಿ ಶೌಚಾಲಯಗಳು ಇಲ್ಲದೇ ಇರುವುದು ಕಂಡು ಬಂದಿರುತ್ತದೆ. ಭಾರತವು ಕೃಷಿ ಪ್ರಧಾನ ರಾಷ್ಟ್ರವಾಗಿದ್ದು ಒಂದು ಅಂದಾಜಿನ ಸರಾಸರಿ ಶೇ.70 ರಷ್ಟು ಜನಸಂಖ್ಯೆಯು ಗ್ರಾಮೀಣ ಪ್ರದೇಶದಲ್ಲಿ ಇರುವುದು ಕಂಡುಬಂದಿದೆ. ಗ್ರಾಮಿಣ ವಿಭಾಗದ ಜನ ಜೀವನ ಮಟ್ಟ ಸುಧಾರಣೆ ಮತ್ತು ಸಾರ್ವಜನಿಕ ಆರೋಗ್ಯದ ಸುಧಾರಣೆಗೆ ಕೇಂದ್ರ ಸರಕಾರವು 1986 ರಿಂದಲೂ ಹಲವಾರು ಯೋಜನೆಗಳನ್ನು ಹಮ್ಮಿಕೊಳ್ಳುತ್ತ ಬಂದಿದೆ. ಕೇಂದ್ರ ಸರಕಾರದ ಜೊತೆಯಲ್ಲಿ ಯೂನಿಸೆಫ್ ಸಂಸ್ಥೆ, ವಿಶ್ವ ಆರೋಗ್ಯ ಸಂಸ್ಥೆಯಂತಹ ಅಂತರಾಷ್ಟ್ರೀಯ ಸಂಸ್ಥೆಗಳು ಕೈಜೋಡಿಸಿದ್ದರು ಸಹ ಗ್ರಾಮೀಣ ವಿಭಾಗದ ಜನರಿಗೆ ಸುರಕ್ಷಿತ ಕುಡಿಯುವ ನೀರು ಹಾಗೂ ನೈರ್ಮಲ್ಯ ವಿಷಯದಲ್ಲಿ ಅಷ್ಟಾಗಿ ಪ್ರಗತಿಯಾಗದೇ ಇರುವುದು ಕಂಡು ಬಂದಿದೆ ಹಾಗೂ ಸ್ವಚ್ಛತೆಯ ಬಗ್ಗೆ ಕಾರ್ಯನಿರ್ವಹಿಸುವಾಗ ಹಲವಾರು ರೀತಿಯ ಸವಾಲುಗಳ ಉದ್ಭವವಾಗುತ್ತವೆ ಈ ಸವಾಲುಗಳು ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಪ್ರೇರೇಪಿತವಾಗಿರುತ್ತವೆ. ಸ್ವಚ್ಛತೆ ಎಂದರೆ ಹಲವಾರು ಘಟಕಗಳನ್ನು ಹೊಂದಿದ್ದು ಅದರಲ್ಲಿ ಶಾಲಾ ಮತ್ತು ಅಂಗನವಾಡಿ ಶೌಚಾಲಯ, ವೈಯಕ್ತಿಕ ಶೌಚಾಲಯ, ಸಮುದಾಯ ಶೌಚಾಲಯ ಮತ್ತು ಸೂಕ್ತ ರೀತಿಯಲ್ಲಿ ಘನ ಮತ್ತು ದ್ರವ ತ್ಯಾಜ್ಯ ವಸ್ತುಗಳ ನಿರ್ವಹಣೆ ಸಹ ಸೇರಿಕೊಂಡಿರುತ್ತದೆ (1).




## ಸಾರ್ವಜನಿಕ ಆರೋಗ್ಯ ಮತ್ತು ನೈರ್ಮಲ್ಯ

ಪರಿಸರವು ಸ್ವಚ್ಛವಾಗಿರದ ಸಂದರ್ಭದಲ್ಲಿ ಮತ್ತು ನಮ್ಮ ಮಲವು ಕುಡಿಯುವ ನೀರಿಗೆ ಸೇರಿ ಕಲುಷಿತವಾದಲ್ಲಿ ಕಾಲರಾ, ಮಲೇರಿಯ, ವಾಂತಿ–ಭೇದಿ, ಟ್ರಕೋಮಾ, ಜಂತು ಹುಳು, ಪೋಲಿಯೋ ದಂತಹ ಕಾಯಿಲೆಗಳು ಸಮುದಾಯದಲ್ಲಿ ಕಂಡು ಬಂದಿರುತ್ತದೆ. ವಿಶ್ವ ಆರೋಗ್ಯ ಸಂಸ್ಥೆಯು 2004 ರಲ್ಲಿ ತಿಳಿಸಿರುವಂತೆ ಸುಮಾರು 1.8 ಮಿಲಿಯನ್ ಜನರು ಡಯೇರಿಯದಂತಹ ಕಾಯಿಲೆಗೆ ತುತ್ತಾಗಿರುತ್ತಾರೆ ಹಾಗೂ ಐದು ವರ್ಷಕಿಂತ ಕಡಿಮೆ ವಯಸ್ಸಿನ ಸುಮಾರು 90% ಮಕ್ಕಳು ಈ ಕಾಯಿಲೆಗೆ ಈಡಾಗುತ್ತಿರುವುದು ಕಂಡು ಬಂದಿರುತ್ತದೆ. ಪೋಲಿಯೋ ಕಾಯಿಲೆಯು ಮಾನವನ ಮಲದಿಂದ ಹರಡುವ ಕಾಯಿಲೆಯಾಗಿದ್ದು 1950 ರ ನಂತರ ನಡೆದ ಮಹತ್ತರ ಬೆಳವಣಿಗೆಯಲ್ಲಿ ಪೋಲಿಯೋ ಕಾಯಿಲೆಯು "ಪೋಲಿಯೋ ಹನಿ" ಔಷಧದಿಂದ ಕಡಿಮೆಯಾಗುತ್ತಿದ್ದು, ಈ ಕಾಯಿಲೆಯು ಸಹ ಮನುಷ್ಯನ ಮಲದಿಂದ ಉಂಟಾಗುತ್ತದೆ ಎಂಬುದು ಸಾರ್ವಜನಿಕ ವಲಯದಲ್ಲಿ ಮರೆತು ಹೋದ ವಿಷಯವಾಗಿದೆ. ಅದೇ ರೀತಿಯಲ್ಲಿ ಚಿಕುನ್‌ಗುನ್ಯ, ಮಲೇರಿಯ, ಕಾಲರ ದಂತಹ ಕಾಯಿಲೆಗಳು ಕಲುಷಿತ ನೀರಿನಿಂದ ಉಂಟಾಗುತ್ತಿದ್ದು ಸಾರ್ಮಜನಿಕ ಆರೋಗ್ಯ ವ್ಯವಸ್ಥೆಯಲ್ಲಿ ಪ್ರಾಥಮಿಕ ಆರೋಗ್ಯ ಪಾಲನೆಗಿಂತ ಕಾಯಿಲೆಗಳಿಗೆ ಔಷಧಿ ಕೊಡುವಂತಹ ಪ್ರವೃತ್ತಿ ಹೆಚ್ಚಾಗುತ್ತದೆ. ಸಮುದಾಯದ ಆರೋಗ್ಯವನ್ನು ಗಮನದಲ್ಲಿಟ್ಟುಕೊಂಡು ಸರಕಾರಿ ಹಾಗೂ ಸರ್ಕಾರೇತರ ಸಂಸ್ಥೆಗಳು, ಪಂಚಾಯತಿರಾಜ್ ವ್ಯವಸ್ಥೆಗಳು ಪರಿಸರ ಸ್ವಚ್ಛತೆಗೆ ಸಂಬಂಧಪಟ್ಟಂತೆ ಒಟ್ಟಾಗಿ ಕಾರ್ಯನಿರ್ವಹಿಸುವುದು ಅನಿವಾರ್ಯವಾಗಿದೆ.

# ಅಧ್ಯಾಯ – 2

## ಕೈಪಿಡಿಯ ಮಾಹಿತಿ

ಈ ಕೈಪಿಡಿಯು ಗ್ರಾಮೀಣ ವಿಭಾಗದ ಜನರಿಗೆ ಸಾರ್ವಜನಿಕ ಆರೋಗ್ಯದ ಬಗ್ಗೆ ಚಿಂತನೆ ನಡೆಸುತ್ತಾ ಅತ್ಯಂತ ಸರಳ ರೀತಿಯಲ್ಲಿ ಪರಿಸರ ಸ್ವಚ್ಛತೆಯ ಗುರಿಯನ್ನು ಹೇಗೆ ಸಾಧಿಸಬೇಕು ಎಂಬುದರ ಬಗ್ಗೆ ಮಾರ್ಗದರ್ಶನ ನೀಡುತ್ತದೆ ಅದರಲ್ಲಿಯೂ ಪ್ರಮುಖವಾಗಿ ಸಮುದಾಯ ಆಧಾರಿತ ಸಂಪೂರ್ಣ ಸ್ವಚ್ಛತೆ, ಕಡಿಮೆ ವೆಚ್ಚದ ಶೌಚಾಲಯಗಳ ನಿರ್ಮಾಣ, ಪರಿಸರ ಸ್ನೇಹಿ ಶೌಚಾಲಯ, ಸೂಕ್ತ ರೀತಿಯಲ್ಲಿ ತ್ಯಾಜ್ಯ ವಸ್ತುಗಳ ನಿರ್ವಹಣೆ ಹಾಗೂ ಇತರೆ ವಿಷಯಗಳ ಬಗ್ಗೆ ವಿಶ್ಲೇಷಿಸುತ್ತದೆ. ಈ ಕೈಪಿಡಿಯನ್ನು ಆರೋಗ್ಯ ಕಾರ್ಯಕರ್ತರು, ಚುನಾಯಿತ ಪ್ರತಿನಿಧಿಗಳು, ಅಧಿಕಾರಿಗಳು, ವಿದ್ಯಾರ್ಥಿಗಳು ಹಾಗೂ ಸಮುದಾಯದವರನ್ನು ಗಮನದಲ್ಲಿ ಇಟ್ಟುಕೊಂಡು ತಯಾರಿಸಲಾಗಿದೆ.




ಮೂಲ :- ಯೂನಿಸೆಫ್ ಹಾಗೂ "ನಿರ್ಮಲ ಭಾರತ ಅಭಿಯಾನ" (ಸಂಪೂರ್ಣ ಸ್ವಚ್ಛತಾ ಆಂದೋಲನ) – ಕೇಂದ್ರ ಸರಕಾರದ ಯೋಜನೆ.

## ಕೈಪಿಡಿಯ ಉದ್ದೇಶ

- ಸ್ವಯಂ ಸೇವಾ ಸಂಸ್ಥೆಗಳು ಗ್ರಾಮೀಣ ಮಟ್ಟದಲ್ಲಿ ಸ್ವಚ್ಛತೆಯ ಬಗ್ಗೆ ಕಾರ್ಯನಿರ್ವಹಿಸುವಾಗ ಪರಿಸರ ಸ್ವಚ್ಛತೆ ಬಗ್ಗೆ ತಿಳಿದುಕೊಳ್ಳಬೇಕು ಹಾಗೂ ಸಮುದಾಯಕ್ಕೆ ಮಾಹಿತಿ ಕೊಡಲು ಕೈಪಿಡಿಯನ್ನು ಉಪಯೋಗಿಸಬಹುದಾಗಿದೆ.
- ಕಡಿಮೆ ವೆಚ್ಚದ ಶೌಚಾಲಯಗಳ ಬಗ್ಗೆ ಸಮುದಾಯಕ್ಕೆ ಅರಿವು ಮೂಡಿಸಲು ಅಗತ್ಯ ಮಾಹಿತಿಯನ್ನು ಕೈಪಿಡಿಯ ಮೂಲಕ ತಿಳಿದುಕೊಳ್ಳಬಹುದಾಗಿದೆ.
- ಗ್ರಾಮೀಣ ಪ್ರದೇಶದಲ್ಲಿ ಘನ ಮತ್ತು ದ್ರವ ತ್ಯಾಜ್ಯ ವಸ್ತುಗಳ ಬಗ್ಗೆ ತಿಳಿದುಕೊಳ್ಳಬೇಕಾದ ಮಾಹಿತಿ ನೀಡಲಾಗಿದೆ.
- "ಪರಿಸರ ಸ್ನೇಹಿ" ಶೌಚಾಲಯಗಳು ಹಾಗೂ ಕಡಿಮೆ ವೆಚ್ಚದ ಶೌಚಾಲಯಗಳ ಬಗ್ಗೆ ಸಾರ್ವಜನಿಕರು ತಿಳಿದುಕೊಳ್ಳಬೇಕಾದ ಅಗತ್ಯ ಮಾಹಿತಿ ಹಾಗೂ ಸಮುದಾಯ ಮತ್ತು ಸಾರ್ವಜನಿಕರು ಅರ್ಥ ಮಾಡಿಕೊಳ್ಳಲು ಸರಳ ರೀತಿಯಲ್ಲಿ ಕೈಪಿಡಿಯನ್ನು ಅಭಿವೃದ್ಧಿ ಪಡಿಸಲಾಗಿದೆ.

# ಅಧ್ಯಾಯ – 3

## ನಿರ್ಮಲ ಭಾರತ ಅಭಿಯಾನ

"ನಿರ್ಮಲ ಭಾರತ ಅಭಿಯಾನ" ಯೋಜನೆಯು ಕೇಂದ್ರ ಸರಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದ್ದು ಸ್ವಚ್ಛತೆ ಎಂಬುದು ಕೇವಲ ಶೌಚಾಲಯ ನಿರ್ಮಾಣ ಮಾಡುವುದು ಮಾತ್ರ ಆಗಿರದೆ ವೈಯಕ್ತಿಕ ಸ್ವಚ್ಛತೆ, ಪರಿಸರ ಸ್ವಚ್ಛತೆ, ಶಾಲಾ ಸ್ವಚ್ಛತೆ, ಅಂಗನವಾಡಿ ಸ್ವಚ್ಛತೆ, ಸುರಕ್ಷಿತ ಕುಡಿಯುವ ನೀರು, ತ್ಯಾಜ್ಯ ವಸ್ತುಗಳ ನಿರ್ವಹಣೆಯಂತಹ ಅಂಶಗಳನ್ನು ಒಳಗೊಂಡಿರುತ್ತದೆ. ಕೇಂದ್ರ ಸರಕಾರವು ಈ ಅಂಶಗಳನ್ನೊಳಗೊಂಡ ಯೋಜನೆ "ಸಂಪೂರ್ಣ ಸ್ವಚ್ಛತಾ ಆಂದೋಲನ" ಕಾರ್ಯಕ್ರಮವನ್ನು 1999 ರಲ್ಲಿ ಜಾರಿಗೆ ತಂದಿದೆ. ಬಳಿಕ 2012 ರಲ್ಲಿ ಸಂಪೂರ್ಣ ಸ್ವಚ್ಛತಾ ಆಂದೋಲನ ಕಾರ್ಯಕ್ರಮವನ್ನು "ನಿರ್ಮಲ ಭಾರತ ಅಭಿಯಾನ" ಎಂದು ಪುನರ್ ನಾಮಕರಣ ಮಾಡಲಾಗಿದೆ. ಈ ಯೋಜನೆಯ ಪ್ರಮುಖ ಅಂಶಗಳೆಂದರೆ.

- ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಪ್ರೋತ್ಸಾಹ ಧನ ನೀಡುವುದು.
- ಶಾಲೆ ಮತ್ತು ಅಂಗನವಾಡಿ ಶೌಚಾಲಯ ನಿರ್ಮಾಣ, ಮಕ್ಕಳಿಗೆ ವೈಯಕ್ತಿಕ ಸ್ವಚ್ಛತೆ ಹಾಗೂ ಪರಿಸರ ಸ್ವಚ್ಛತೆ ಬಗ್ಗೆ ಉತ್ತೇಜನ ನೀಡುವುದು.
- "ಗ್ರಾಮೀಣ ನೀರು ಮತ್ತು ನೈರ್ಮಲ್ಯ" ಸಮಿತಿಗಳಿಗೆ ತರಬೇತಿ ನೀಡಿ ಇತರೇ ಚಟುವಟಿಕೆಗಳಿಂದ ಬಲವರ್ಧನೆ ಮಾಡುವುದು.
- "ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ" ಜೊತೆಯಲ್ಲಿ ಕಾರ್ಯನಿರ್ವಹಿಸುವುದು.
- ಸೂಕ್ತ ರೀತಿಯಲ್ಲಿ ತ್ಯಾಜ್ಯ ವಸ್ತುಗಳ ನಿರ್ವಹಣೆ ಮಾಡುವುದು.
- ಕೆಲವು (ಮಾರ್ಗಸೂಚಿಯಲ್ಲಿ ತಿಳಿಸಿರುವ ನಿಬಂಧನೆಗೊಳಪಟ್ಟು) ಬಡತನ ರೇಖೆಗಿಂತ ಮೇಲ್ಪಟ್ಟ ಕುಟುಂಬಗಳಿಗೆ ಧನ ಸಹಾಯ ಮಾಡುವುದು) (2).

### ಯೋಜನೆಯ ಉದ್ದೇಶಗಳು

- **ಗ್ರಾಮೀಣ ವಿಭಾಗದ ಜನಜೀವನ ಮಟ್ಟ ಸುಧಾರಣೆ ಮಾಡುವುದು.**
- **2022 ರೊಳಗೆ ದೇಶವನ್ನು "ನಿರ್ಮಲ ಭಾರತ" ಮಾಡಬೇಕೆನ್ನುವ ಸರ್ಕಾರದ ದೃಷ್ಟಿಕೋನವನ್ನು ಸಕಾರಗೊಳಿಸಲು ಶ್ರಮಿಸುವುದು.**
- **ಸುಸ್ಥಿರ ಸ್ವಚ್ಛತಾ ಅಭ್ಯಾಸಗಳನ್ನು ರೂಢಿಸಿಕೊಳ್ಳುವ ಸಂಬಂಧ ಪಂಚಾಯತಿರಾಜ್ ವ್ಯವಸ್ಥೆಯನ್ನು ಆರೋಗ್ಯ ಶಿಕ್ಷಣ ನೀಡಿ ಬಲಗೊಳಿಸುವುದು.**
- **ಕಡಿಮೆ ವೆಚ್ಚದ ಹಾಗೂ ಸೂಕ್ತ ತಂತ್ರಜ್ಞಾನವನ್ನು ರೂಡಿಸಿಕೊಂಡು ಸ್ವಚ್ಛತೆಯನ್ನು ಕಾಪಾಡಲು ಶ್ರಮಿಸುವುದು.**
- **ಗ್ರಾಮ ಸುಚಿತ್ವಕ್ಕೆ ಮಹತ್ವ ನೀಡಿ ಸೂಕ್ತ ರೀತಿಯಲ್ಲಿ "ಘನ ಮತ್ತು ದ್ರವ ತ್ಯಾಜ್ಯ ವಸ್ತುಗಳ" ನಿರ್ವಹಣೆಗೆ ಶ್ರಮಿಸುವುದು (2).**

## ನಿರ್ಮಲ ಭಾರತ ಅಭಿಯಾನ ಯೋಜನೆಯಡಿಯಲ್ಲಿ ವಿವಿಧ ಘಟಕಗಳಿಗೆ ಅನುದಾನ ಹಂಚಿಕೆ :

| ಕ್ರಮ ಸಂ | ನಿರ್ಮಲ ಭಾರತ ಅಭಿಯಾನ ಯೋಜನೆಯಲ್ಲಿ ತಿಳಿಸಿರುವ ಘಟಕಗಳು | ನಿರ್ಮಲ ಭಾರತ ಅಭಿಯಾನ ಯೋಜನೆ ಅಡಿಯಲ್ಲಿ ಅನುದಾನ ಹಂಚಿಕೆ | ಅನುದಾನ ಹಂಚಿಕೆಯ ಪಾಲುದಾರ | | |
|---|---|---|---|---|---|
| | | | ಕೇಂದ್ರ | ರಾಜ್ಯ | ಫಲಾನುಭವಿ |
| 1 | ಐ.ಇ.ಸಿ, ತರಬೇತಿ ಕಾರ್ಯಕ್ರಮಗಳು ಹಾಗೂ ಯೋಜನೆಯ ಪ್ರಾರಂಭಿಕ ಹಂತದ ಕಾರ್ಯಕ್ರಮಗಳಿಗೆ | ಶೇ.15 ರಷ್ಟು | 80% | 20% | 0% |
| 2 | ಸುತ್ತು ನಿಧಿ | ಶೇ.5 ರಷ್ಟು | 80% | 20% | 0% |
| 3 | ವೈಯಕ್ತಿಕ ಶೌಚಾಲಯ ನಿರ್ಮಾಣ | ನಿರ್ಮಲ ಭಾರತ ಅಭಿಯಾನ ಕಾರ್ಯಕ್ರಮದಡಿಯಲ್ಲಿ | 3200.00 | 1400.00 | 900.00 |
| | | ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ | 26 ದಿನಗಳ ಕೂಲಿ | | |
| 4 | ಸಮುದಾಯ ಶೌಚಾಲಯ | ರೂ.2 ಲಕ್ಷ ದವರಗೆ | 60 | 30 | 10 |
| 5 | ಶಾಲಾ ಶೌಚಾಲಯಗಳು | ರೂ.35000/– | 70 | 30 | 0 |
| 6 | ಅಂಗನವಾಡಿ ಶೌಚಾಲಯಗಳು | ರೂ.8000/– | 70 | 30 | 0 |
| 7 | ಆಡಳಿತ ನಿರ್ವಹಣೆ | ಶೇ.4 ರಷ್ಟು | 80 | 20 | 0 |
| 8 | ತ್ಯಾಜ್ಯ ವಸ್ತುಗಳ ನಿರ್ವಹಣೆ | | 70 | 30 | 0 |
| ಮೂಲ–ನಿರ್ಮಲ ಗ್ರಾಮ ಅಭಿಯಾನ ಯೋಜನೆಯ ಮಾರ್ಗಸೂಚಿ | | | | ಜುಲೈ 2012 | |

# ಅಧ್ಯಾಯ – 4

## ಸಮುದಾಯ ಆಧಾರಿತ ಸಂಪೂರ್ಣ ಸ್ವಚ್ಛತೆ

ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಸಂಸ್ಥೆಗಳು ಸಮುದಾಯದ ಆರೋಗ್ಯವನ್ನು ಗಮನದಲ್ಲಿಟ್ಟುಕೊಂಡು "ಪರಿಸರ ಸ್ವಚ್ಛತೆ"ಯನ್ನು ಕಾಪಾಡುವ ಸಲುವಾಗಿ ಹಲವಾರು ಯೋಜನೆಗಳನ್ನು ಜಾರಿಗೆ ತಂದಿರುತ್ತದೆ. ಆದರೆ ವಾಸ್ತವವಾಗಿ ಯೋಜನೆಗಳ ಪ್ರಗತಿಯನ್ನು ನೋಡಿದರೆ ಹಲವಾರು ಅಂಶಗಳನ್ನು ನಾವೂ ಗಮನಿಸಬಹುದಾದ ವಿಷಯಗಳೆಂದರೆ ಹಲವಾರು ಯೋಜನೆಗಳಿಂದ ಸರಕಾರ/ಸಂಸ್ಥೆಗಳು ಕಟ್ಟಿಸಿದ ವೈಯಕ್ತಿಕ ಶೌಚಾಲಯಗಳನ್ನು ಸಮುದಾಯವು ಉಪಯೋಗಿಸದೆ ಹಾಳಾಗಿರುವುದನ್ನು ಕಾಣಬಹುದಾಗಿದೆ. ಅದರಂತೆ ಉದಾಹರಣೆಗೆ 1999–2000ರಲ್ಲಿ ಬಾಂಗ್ಲಾದೇಶದಲ್ಲಿ ನೀರು ಮತ್ತು ನೈರ್ಮಲ್ಯ ಯೋಜನೆಯ ಬಗ್ಗೆ ಮೌಲ್ಯಮಾಪನ ನಡೆಸಿದಾಗ, ಶೌಚಾಲಯ ನಿರ್ಮಾಣವಾದ ನಂತರವೂ ಸಾರ್ವಜನಿಕರು ಬಯಲು ಮಲ ವಿಸರ್ಜನೆಗೆ ಹೋಗುವುದು ಕಂಡುಬಂದಾಗ ಡಾ.ಕಮಲಕಾರ್‌ರವರು ಹಾಗೂ ಇತರರು ಚರ್ಚೆ ನಡೆಸಿ ಸಮುದಾಯದ ಬಯಲು ಮಲ ವಿಸರ್ಜನೆ ರೂಢಿಯನ್ನು ಪರಿವರ್ತನೆ ಮಾಡಬೇಕಾದರೆ "ಸಮುದಾಯದ ಮನ ಪರಿವರ್ತನೆ" ಆಗುವುದು ಅವಶ್ಯಕ ಎಂದು ಪ್ರತಿಪಾದಿಸಿದ್ದಾರೆ. ನಂತರ ಅವರು ಸ್ಥಳೀಯ ಸರ್ಕಾರೇತರ ಸಂಸ್ಥೆಯಾದ ವಿಇಆರ್‌ಸಿ (ವಿಲೇಜ್ ಎಡುಕೇಷನ್ ರಿಸೋರ್ಸ್ ಸೆಂಟರ್) ನೊಂದಿಗೆ ಬಾಂಗ್ಲಾದೇಶದ ರಾಜ್‌ಶಾಹಿ ಜಿಲ್ಲೆಯ ಮಸ್‌ಮೈಲ್ ಗ್ರಾಮದಲ್ಲಿ ಪಿಆರ್‌ಎ ತಂತ್ರವನ್ನು ಬಳಸಿ, ನೈರ್ಮಲ್ಯಕ್ಕೆ ಸಂಬಂಧಿಸಿದಂತೆ ಜನರ ಮನಪರಿವರ್ತನೆಯ ಮಾರ್ಗಗಳನ್ನು ಕಂಡುಹಿಡಿದರು. ಮುಂದುವರೆದು ಈ ಮಾರ್ಗವನ್ನು ಸಿ.ಎಲ್.ಟಿ.ಎಸ್ ಮಾರ್ಗೋಪಾಯವೆಂದು ಕರೆಯಲಾಯಿತು (9).

ಸಮುದಾಯ ಆಧಾರಿತ ಸಂಪೂರ್ಣ ಸ್ವಚ್ಛತೆ ತರಬೇತಿಯು (ಸಿ.ಎಲ್.ಟಿ.ಎಸ್) ಸಮುದಾಯಾದಾರಿತವಾಗಿ ಕಾರ್ಯನಿರ್ವಹಿಸುತ್ತಿದೆ. ಸಿ.ಎಲ್.ಟಿ.ಎಸ್ ತರಬೇತಿಯಲ್ಲಿ ಶೌಚಾಲಯ ನಿರ್ಮಾಣ ಮಾಡುವುದು ಮಾತ್ರವಲ್ಲದೆ ಸಮುದಾಯವು ಬಯಲು ಮಲ ವಿಸರ್ಜನೆ ಮುಕ್ತವಾಗಿಸುವ ನಿಟ್ಟಿನಲ್ಲಿ ತರಬೇತಿಗಳನ್ನು ಹಮ್ಮಿಕೊಳ್ಳಲಾಗುತ್ತದೆ ಹಾಗೂ ಸಮುದಾಯ ಸ್ವಚ್ಛತಾ ವಿಷಯದಲ್ಲಿ ಯೋಜನೆಯನ್ನು ತಯಾರಿಸಿ, ತಮ್ಮ ಗ್ರಾಮ/ ಗ್ರಾಮ ಪಂಚಾಯತ್ ಜೊತೆಗೆ ಬಯಲು ಮಲ ವಿಸರ್ಜನೆ ಮುಕ್ತ ಪ್ರದೇಶವನ್ನಾಗಿ ಪರಿವರ್ತಿಸಲು ನಡೆಸಬೇಕಾದ ಕಾರ್ಯತಂತ್ರಗಳ ಬಗ್ಗೆ ಚರ್ಚಿಸಲಾಗುತ್ತದೆ. ಶೌಚಾಲಯ ನಿರ್ಮಾಣ ಮಾಡಲು/ಬಯಲು ಮಲ ವಿಸರ್ಜನೆ ಮುಕ್ತ ಪ್ರದೇಶವನ್ನಾಗಿಸಲು ಸ್ಥಳೀಯ ತಂತ್ರಜ್ಞಾನವನ್ನು ಉಪಯೋಗಿಸುವುದು ಸಹ ಒಂದು ಪ್ರಮುಖ ಅಂಶವಾಗಿದೆ. ಸಿ.ಎಲ್.ಟಿ.ಎಸ್ ಮಾರ್ಗದಲ್ಲಿ ಸಮುದಾಯವನ್ನು ಬಯಲು ಮಲ ವಿಸವರ್ಜನೆ ಮುಕ್ತವಾಗಿಸುವತ್ತ ಪ್ರೇರೇಪಿಸಲು ಹಲವಾರು ತಂತ್ರಗಳನ್ನು ಉಪಯೋಗಿಸಲಾಗುತ್ತದೆ (9).

## ಪ್ರೇರಣಾ ವಿಷಯಗಳು

### ಶಿಕ್ಷಣ

ಸಮುದಾಯದ ಜನರು ಹೆಚ್ಚು ಶಿಕ್ಷಿತರಾಗಿದಲ್ಲಿ ಬಯಲು ಮಲ ವಿಸರ್ಜನೆಯಿಂದ ಆರೋಗ್ಯದ ಮೇಲೆ ಆಗುವ ಪರಿಣಾಮಗಳ ಬಗ್ಗೆ ಹೆಚ್ಚಾಗಿ ತಿಳಿದುಕೊಂಡಿರುತ್ತಾರೆ. ಉದಾಹರಣೆಗೆ ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಹಾಗೂ ಇತರೇ ಜಿಲ್ಲೆಗಳಲ್ಲಿ ಸುಶಿಕ್ಷಿತ ಸಮುದಾಯವು ಹೆಚ್ಚಾಗಿದ್ದು ಈ ಜಿಲ್ಲೆಗಳಲ್ಲಿ ಬಯಲು ಮಲ ವಿಸರ್ಜನಾ ಪದ್ಧತಿಯು ಬಹಳ ಕಡಿಮೆ ಆಗಿದೆ. ಆದರೆ ರಾಜ್ಯದ ಉತ್ತರ ಕರ್ನಾಟಕ ಜಿಲ್ಲೆಗಳಾದ ಗುಲ್ಬರ್ಗ, ಬೀದರ್, ರಾಯಚೂರು ಹಾಗೂ ಇತರೇ ಜಿಲ್ಲೆಗಳಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಹಿಂದುಳಿದ ಜಿಲ್ಲೆಗಳಾಗಿದ್ದು ಬಯಲು ಮಲ ವಿಸರ್ಜನೆ ಹೆಚ್ಚಾಗಿದೆ. ಆದ್ದರಿಂದ "ಪರಿಸರ ಸ್ವಚ್ಛತೆ" ಬಗ್ಗೆ ಅರಿವು ಮೂಡಿಸಲು ಶಿಕ್ಷಣ ಸಹ ಒಂದು ಅಂಶವಾಗಿರುತ್ತದೆ. ಸಮುದಾಯದಲ್ಲಿ ಮುಖ್ಯವಾಗಿ ಮಹಿಳೆಯರು ಮತ್ತು ಮಕ್ಕಳು ಹೆಚ್ಚು ಸುಶಿಕ್ಷಿತರಾಗಿದ್ದಲ್ಲಿ ಸಮುದಾಯ ಆರೋಗ್ಯ ಬಗ್ಗೆ ಅರಿವು ಮೂಡಿಸಲು ಸುಲಭವಾಗುತ್ತದೆ ಹಾಗೂ ಕರ್ನಾಟಕವನ್ನು ಬಯಲು ಮಲ ವಿಸರ್ಜನೆ ಮುಕ್ತ ರಾಜ್ಯವನ್ನಾಗಿಸಲು ಸಾಧ್ಯವಾಗುತ್ತದೆ.

### ಚುನಾಯಿತ ಪ್ರತಿನಿಧಿಗಳ ಆಸಕ್ತಿ

ಪಂಚಾಯತ್ ರಾಜ್ ವ್ಯವಸ್ಥೆಯ ಚುನಾಯಿತ ಪ್ರತಿನಿಧಿಗಳಾದ ಗ್ರಾಮ ಪಂಚಾಯತಿ ಸದಸ್ಯರುಗಳು, ತಾಲ್ಲೂಕು ಪಂಚಾಯಿತಿ ಸದಸ್ಯರುಗಳು, ಜಿಲ್ಲಾ ಪಂಚಾಯತಿ ಸದಸ್ಯರುಗಳು ಹಾಗೂ ಇತರೆ ರಾಜಕೀಯ ನಾಯಕರು ಆಸಕ್ತಿ ವಹಿಸಿದರೆ ಸ್ವಚ್ಛತಾ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಬಹುದಾಗಿದೆ.

## ಕೇಂದ್ರ ಮತ್ತು ರಾಜ್ಯ ಸರಕಾರದಿಂದ ಪುರಸ್ಕಾರಗಳು

ಕೇಂದ್ರ ಸರಕಾರದ ಪುರಸ್ಕಾರ "ನಿರ್ಮಲ ಗ್ರಾಮ ಪುರಸ್ಕಾರ" ಹಾಗೂ ರಾಜ್ಯ ಪುರಸ್ಕಾರ "ನೈರ್ಮಲ್ಯ" ಸಹ ಗ್ರಾಮ ಪಂಚಾಯತಿ ಮಟ್ಟದಲ್ಲಿ ಪ್ರೇರಣೆ ನೀಡುವಂತಹ ಕೆಲಸವನ್ನು ನಿರ್ವಹಿಸುತ್ತಿವೆ.

## ಶೌಚಾಲಯ ನಿರ್ಮಾಣ ಮಾಡಲು ಕಡಿಮೆ ವೆಚ್ಚದ ತಂತ್ರಜ್ಞಾನ

ಸಾಮಾನ್ಯವಾಗಿ ಜನರಲ್ಲಿ ಶೌಚಾಲಯ ನಿರ್ಮಾಣವೆಂದರೆ ರೂ.25000/- ದಿಂದ ರೂ.30000/- ದವರಗೆ ಹಣ ಬೇಕಾಗುತ್ತದೆ ಎಂಬ ನಂಬಿಕೆಯಿದೆ. ಆದರೆ ಸಮುದಾಯಕ್ಕೆ ಅಥವಾ ಗಾರೆ ಕೆಲಸಗಾರರಿಗೆ ಸ್ಥಳೀಯವಾಗಿ ಸಿಗುವಂತಹ ತಂತ್ರಜ್ಞಾನ/ಸಾಮಾಗ್ರಿಗಳನ್ನು ಉಪಯೋಗಿಸಿ ಶೌಚಾಲಯಗಳನ್ನು ನಿರ್ಮಾಣ ಮಾಡುವ ಬಗ್ಗೆ ತರಬೇತಿ ಹಾಗೂ ಸೂಕ್ತ ಮಾರ್ಗದರ್ಶನ ನೀಡಿದರೆ ಸಾರ್ವಜನಿಕರಲ್ಲಿ ಇರುವಂತಹ ತಪ್ಪು ಮಾಹಿತಿಯನ್ನು ಹೋಗಲಾಡಿಸಿ ಕಡಿಮೆ ವೆಚ್ಚದ ಸೂಕ್ತ ತಂತ್ರಜ್ಞಾನವನ್ನೊಳಗೊಂಡ ಶೌಚಾಲಯವನ್ನು ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ.

## ಸ್ಥಳೀಯವಾಗಿ ನಡೆದಿರುವ ಘಟನೆಗಳು

ಬಯಲು ಮಲ ವಿಸರ್ಜನೆಗೆಂದು ಹೋಗುವ ಮಹಿಳೆಯರ ಮತ್ತು ಮಕ್ಕಳ ಮೇಲೆ ಆಗಿರುವಂತಹ ದೌರ್ಜನ್ಯಗಳು, ಹಾಗೂ ಇತರೆ ಸಮಸ್ಯೆಗಳ ಬಗ್ಗೆ ಜನರಲ್ಲಿ ಮನವರಿಕೆ ಮಾಡಿಕೊಟ್ಟಲ್ಲಿ ಸಮುದಾಯವು ವಾಸಿಸುವ ಪ್ರದೇಶವನ್ನು ಬಯಲು ಮಲ ವಿಸರ್ಜನೆ ಮುಕ್ತವನ್ನಾಗಿಸಲು ಪ್ರೇರಣೆ ನೀಡಿದ ಹಾಗೆ ಆಗುತ್ತದೆ.

## ಪ್ರೇರಣಾ ಸಾಧನಗಳು

ಸಿ.ಎಲ್.ಟಿ.ಎಸ್ ತರಬೇತಿ ಕೈಪಿಡಿಯಲ್ಲಿ ಹಲವಾರು ಪ್ರೇರಣಾ ಸಾಧನಗಳಿದ್ದು ಅವುಗಳು ಸಮುದಾಯವನ್ನು ನೈರ್ಮಲ್ಯಕ್ಕೆ ಸಂಬಂಧಿಸಿದಂತೆ ಪ್ರೇರಣೆಯನ್ನು ನೀಡಿ ಅವರ ಜೀವನದಲ್ಲಿ ಬದಲಾವಣೆಯನ್ನು ತರಲು ಸಹಕಾರಿಯಾಗಿದೆ. ಸಿ.ಎಲ್.ಟಿ.ಎಸ್ ಕೈಪಿಡಿಯಲ್ಲಿ ತಿಳಿಸಿರುವಂತೆ ಈ ಸಾಧನಗಳನ್ನು "ಪರಿಸರ ಸ್ವಚ್ಛತೆ" ಕುರಿತು ಸಮುದಾಯದೊಡನೆ ಕೆಲಸ ಮಾಡುವಾಗ ಉಪಯೋಗಿಸಬಹುದಾಗಿದೆ (9).

1. ಬಾಂಧವ್ಯವೃದ್ಧಿ
2. ನಾಚಿಕೆ ನಡಿಗೆ
3. ಗ್ರಾಮದ ಮಲ ವಿಸರ್ಜನೆ ನಕ್ಷೆ
4. ಮಲದ ಲೆಕ್ಕಾಚಾರ
5. ಎಫ್-ರೇಖಾಚಿತ್ರ
6. ಅನಾರೋಗ್ಯದ ಖರ್ಚಿನ ಲೆಕ್ಕಾಚಾರ
7. ನೀರಿನ ಗುಣಮಟ್ಟ ಪರೀಕ್ಷೆ

## ಬಾಂಧವ್ಯವೃದ್ಧಿ

ಸಮುದಾಯವನ್ನು ಒಂದೆಡೆ ಸೇರಿಸಿ ಅವರೊಂದಿಗೆ ಚರ್ಚೆ ನಡೆಸಿ ಸಹಕಾರ ಮತ್ತು ವಿಶ್ವಾಸ ಗಳಿಸುವುದರ ಮೂಲಕ ಬಾಂಧವ್ಯವೃದ್ಧಿ ಮಾಡಬಹುದಾಗಿದೆ. ಯಾವುದೇ ರೀತಿ ಈ ಸಮುಯದಲ್ಲಿ ಸಮುದಾಯದೊಡನೆ ಊರಿನ ಒಳ್ಳೆಯ ಸ್ಥಳಗಳ ಬಗ್ಗೆ ಚರ್ಚೆ ನಡೆಸಿದ ನಂತರ ಊರಿನ ನೈರ್ಮಲ್ಯದ ಸ್ಥಿತಿಗತಿ ಬಗ್ಗೆ ಕೂಡ ಚರ್ಚೆ ನಡೆಸಬಹುದಾಗಿದೆ. ನಂತರ ಗ್ರಾಮದ ಶಾಲೆ, ಅಂಗನವಾಡಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಉಪಕೇಂದ್ರ, ಕೃಷಿ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚೆ ನಡೆಸಬಹುದಾಗಿದೆ.



ಹಾವೇರಿ ಜಿಲ್ಲೆಯ ಹಂದಿಗನೂರು ಗ್ರಾಮ
ದಿನಾಂಕ :18.11.2011 & 19.11.2011

ಬಾಂಧವ್ಯವೃದ್ಧಿಯಿಂದ ತರಬೇತಿಯ ಮುಂದಿನ ಹಂತಗಳಲ್ಲಿ ಸಮುದಾಯವು ತಮ್ಮ ಅನಿಸಿಕೆಯನ್ನು ಹಾಗೂ ವಿವಿಧ ವಿಷಯಗಳ ಬಗ್ಗೆ ಮುಕ್ತವಾಗಿ ಚರ್ಚೆ ನಡೆಸಲು ಅನುಕೂಲಕರ ವಾತಾವರಣ ನಿರ್ಮಾಣವಾಗುತ್ತದೆ. ಸಮುದಾಯದ ಜೊತೆ ಚರ್ಚೆ ನಡೆಸುವಾಗ ಸಾರ್ವಜನಿಕರಿಗೆ ಆಘಾತವಾಗುವಂತಹ ಪ್ರಶ್ನೆಗಳನ್ನು ಕೇಳಬಾರದು ಮತ್ತು ತರಬೇತಿಗೆ ಒಂದು ದಿನ ಮುಂಚಿತವಾಗಿಯೇ ಗ್ರಾಮಕ್ಕೆ ತೆರಳಿ ಸಮುದಾಯವನ್ನು ಒಂದು ಕಡೆ ಸೇರಲು ತಿಳಿಸಿ ನಂತರ ಚರ್ಚೆ ನಡೆಸುವುದು ಅಗತ್ಯವಾಗಿರುತ್ತದೆ (9).

## ನಾಚಿಕೆ ನಡಿಗೆ



ಹಾವೇರಿ ಜಿಲ್ಲೆಯ ಹವನೂರು ಗ್ರಾಮ
ದಿನಾಂಕ :– 18.11.2011 & 19.11.2011

ಈ ಸಾಧನವು ಸಮುದಾಯವನ್ನು ಬಯಲು ಮಲ ವಿಸರ್ಜನೆಯಿಂದ ಆಗುವಂತಹ ಪರಿಣಾಮಗಳಾದ ಪರಿಸರ ಮಾಲಿನ್ಯ ಹಾಗೂ ಸಮುದಾಯ ಆರೋಗ್ಯ ಮೇಲೆ ಆಗುವ ಪರಿಣಾಮ ಬಗ್ಗೆ ಮನವರಿಕೆ ಮಾಡಿಕೊಡುವ ತಂತ್ರವಾಗಿದೆ. ಈ ತಂತ್ರದಿಂದಲೇ ಸಮುದಾಯದ ಮೇಲೆ ಹೆಚ್ಚಿನ ಪರಿಣಾಮಗಳು ಆಗುವ ಸಾಧ್ಯತೆಗಳನ್ನು ನಾವು ಕಾಣಬಹುದಾಗಿದೆ. ಈ ಪ್ರೇರಣಾ ಸಾಧನದಲ್ಲಿ ಮೊದಲನೆಯದಾಗಿ ಸಮುದಾಯವನ್ನು ತಮ್ಮ ಹಳ್ಳಿಯ ಸುಂದರ ಜಾಗ ತೋರಿಸುವಂತೆ ಮನವಿ ಮಾಡುವುದು ಮತ್ತು ಆ ಜಾಗವನ್ನು ನೋಡಿದ ನಂತರ ಆ ಪ್ರದೇಶವನ್ನು ಸುಂದರವನ್ನಾಗಿಸಿದ ಸಮುದಾಯದ ಶ್ರಮವನ್ನು ಹೊಗಳುವುದು. ನಂತರ ಸಮುದಾಯದ ಕೆಟ್ಟ ಸ್ಥಳ ತೋರಿಸುವಂತೆ ಕೇಳುವುದು ಮತ್ತು ಮಲ ವಿಸರ್ಜನೆಯ ಪ್ರದೇಶದಲ್ಲಿ ಸಮುದಾಯಕ್ಕೆ ಈ ಮಲ ಯಾರದ್ದು ಬಡವರದ್ದೋ/ಶ್ರೀಮಂತರದ್ದೋ, ಪುರುಷರದ್ದೋ/ಮಹಿಳೆಯರದ್ದೋ ಎಂಬ ಹಲವರು ಪ್ರಶ್ನೆಗಳನ್ನು ಕೇಳುವುದು ಮತ್ತು ಮಲ, ನೋಣ ಮತ್ತು ಕುಡಿಯುವ ನೀರಿಗೆ ಇರುವ ಸಂಬಂಧಗಳ ಬಗ್ಗೆ ವಿವರಣೆ ನೀಡುವುದು. ತರಬೇತಿ ನೀಡುವಾಗ ಯಾರೊಬ್ಬರ ಹೆಸರನ್ನು ಸೂಚಿಸಿ ವಿವರಣೆ ನೀಡುವುದು ಸೂಕ್ತವಾಗಿರುವುದಿಲ್ಲಾ (9).



ಹಾವೇರಿ ಜಿಲ್ಲೆಯ ಹಾವನೂರು ಗ್ರಾಮ
ದಿನಾಂಕ : 18.11.2011 & 19.11.2011

**ನಾವು ವಿಸರ್ಜಿಸಿದ ಮಲ ನಮ್ಮ ದೇಹದೊಳಗೆ :** ಸಮುದಾಯದೊಂದಿಗೆ ನಾಚಿಕೆ ನಡಿಗೆ ಮುಗಿಸಿದ ನಂತರ ಎಲ್ಲರನ್ನು ಜನರು ಮಲ ವಿಸರ್ಜನೆ ಮಾಡುವ ಜಾಗಕ್ಕೆ ಕರೆದುಕೊಂಡು ಹೋಗುವುದು. ನಂತರ ಮಲ ವಿಸರ್ಜನೆ ಮಾಡಿರುವ ಜಾಗದ ಸುತ್ತ ವೃತ್ತಾಕರವಾಗಿ ಜನರನ್ನು ನಿಲ್ಲಿಸಿ ನಾವು ಮೊದಲೇ ತೆಗೆದುಕೊಂಡು ಹೋಗಿದ್ದ ಸಿಹಿ ತಿಂಡಿಯನ್ನು ಮಲದ ಪಕ್ಕ ಇಟ್ಟು ನಂತರ ಗಾಜಿನ ಲೋಟದಲ್ಲಿ ಕುಡಿಯುವ ನೀರನ್ನು ಹಾಕಿ ಕುಡಿಯಲು ಹೇಳುವುದು ಇದಾದ ನಂತರ ಕೂದಲಿನಿಂದ ಮಲಕ್ಕೆ ಅದ್ದಿ ಮತ್ತೆ ಕುಡಿಯುವ ನೀರಿರುವ ಗಾಜಿನ ಲೋಟಕ್ಕೆ ಅದ್ದಿ ಸಮುದಾಯಕ್ಕೆ ನೀರನ್ನು ಕುಡಿಯಲು ಹೇಳುವುದು ಆ ಸಮಯದಲ್ಲಿ ಸಮುದಾಯದಲ್ಲಿ ಆಗುವ ಬದಲಾವಣೆಯನ್ನು ವೀಕ್ಷಿಸುವುದು ನಂತರ ತಾಜಾ ಮಲವಿರುವ ಜಾಗದಲ್ಲಿ ಇಡಲಾಗಿರುವ ಸಿಹಿ ತಿಂಡಿಯನ್ನು ತೋರಿಸಿ ಕುಡಿಯುವ ನೀರಿನಿಂದ ಹಾಗೂ ಆಹಾರದಿಂದ ನಮ್ಮ ಮಲ ಹೇಗೆ ನಮ್ಮ ದೇಹಕ್ಕೆ ಸೇರುತ್ತದೆ ಎಂಬುದರ ಬಗ್ಗೆ ಸಮುದಾಯಕ್ಕೆ ತಿಳಿಸುವುದು (9).


## ಮಲದ ಲೆಕ್ಕಾಚಾರ :

| ಒಬ್ಬ ಮನುಷ್ಯ ಒಂದು ದಿನಕ್ಕೆ ಅಂದಾಜು 250 ಗ್ರಾಂ ಮಲ ವಿಸರ್ಜನೆ ಮಾಡುತ್ತಾನೆ | |
|---|---|
| ಒಂದು ತಿಂಗಳಿಗೆ | 7500 ಗ್ರಾಂ |
| ಒಂದು ವರ್ಷಕ್ಕೆ | 90000 ಗ್ರಾ |

ನಂತರ ಗ್ರಾಮದ ಜನಸಂಖ್ಯೆ ಹಾಗೂ ಮಲ ವಿಸರ್ಜನೆಯ ಬಗ್ಗೆ ಚರ್ಚೆ

ಒಂದು ಕಾಗದ ಮತ್ತು ಕಲರ್ ಪೆನ್ನು ತೆಗೆದು ಕೊಂಡು ಒಬ್ಬ ಮನುಷ್ಯ ಒಂದು ದಿನಕ್ಕೆ ಎಷ್ಟು ಮಲ ವಿಸರ್ಜನೆ ಮಾಡುತ್ತಾನೆ. ಒಂದು ತಿಂಗಳಿಗೆ ಎಷ್ಟು ಮಲ ವಿಸರ್ಜನೆ ಮಾಡುತ್ತಾನೆ ಮತ್ತು ವರ್ಷಕ್ಕೆ ಎಷ್ಟು ಮಲ ವಿಸರ್ಜನೆ ಮಾಡುತ್ತಾನೆ ಎಂಬ ಲೆಕ್ಕಾಚಾರವನ್ನು ಹಾಕುವುದು ನಂತರ ಗ್ರಾಮದಲ್ಲಿ ಇರುವಂತಹ ಜನ ಸಂಖ್ಯೆ ಬಗ್ಗೆ ಚರ್ಚೆ ನಡೆಸಿ ಎಲ್ಲರೂ ಸೇರಿ ವರ್ಷಕ್ಕೆ ಎಷ್ಟು ಮಲ ವಿಸರ್ಜನೆ ಮಾಡುತ್ತಾರೆ ಎಂದು ಲೆಕ್ಕಾಚಾರ ಹಾಕುವುದು ನಂತರ ಸಮುದಾಯಕ್ಕೆ ಮಲವು ವಿವಿಧ ಮೂಲಗಳ ಮೂಲಕ ನಮ್ಮ ದೇಹಕ್ಕೆ ಸೇರುತ್ತದೆ ಎಂಬುದರ ಬಗ್ಗೆ ಮಾಹಿತಿ ಕೊಡುವುದು (9).

## ಎಫ್–ರೇಖಾ ಚಿತ್ರ




ಮೂಲ :– ಯೂನಿಸೆಫ್ **( UNICEF )**

ಎಫ್ – ರೇಖಾ ಚಿತ್ರವನ್ನು ಬಳಸಿ ಗ್ರಾಮದ ನೈರ್ಮಲ್ಯದ ಸ್ಥಿತಿ–ಗತಿ ಬಗ್ಗೆ ಚರ್ಚೆ ನಡೆಸುವುದು ನಂತರ ಬಯಲಿನಲ್ಲಿ ಮಲವಿಸರ್ಜನೆ ಮಾಡುವುದರಿಂದ ವಿವಿಧ ಮೂಲಗಳಿಂದ ಮನುಷ್ಯನ ದೇಹದೊಳಗೆ ಮಲ ಹೇಗೆ ಸೇರುತ್ತದೆ ಮತ್ತು ಇದರಿಂದ ಆರೋಗ್ಯದ ಮೇಲೆ ಆಗುವ ಪರಿಣಾಮಗಳ ಬಗ್ಗೆ ಚರ್ಚೆ ನಡೆಸಿ ಬಯಲು ಮಲ ವಿಸರ್ಜನೆಯಿಂದ ಸಮುದಾಯದ ಆರೋಗ್ಯದ ಮೇಲೆ ಆಗುವಂತಹ ಪರಿಣಾಮಗಳ ಬಗ್ಗೆ ಚರ್ಚೆ ನಡೆಸುವುದು (9).

## ಅನಾರೋಗ್ಯದ ಖರ್ಚಿನ ಲೆಕ್ಕಾಚಾರ

ಜನರಿಗೆ ಬರುವಂತಹ ಸಾಮಾನ್ಯ ಕಾಯಿಲೆಗಳ ಬಗ್ಗೆ ತಿಳಿಸಿಕೊಡುವುದು, ಅವರು ವಾಸಿಸುವ ಸ್ಥಳದಲ್ಲಿ ಕಲುಷಿತ ನೀರು ಮತ್ತು ಸರಿಯಾದ ನೈರ್ಮಲ್ಯ ವ್ಯವಸ್ಥೆ ಇಲ್ಲದೇ ಇರುವುದರಿಂದ ಉಂಟಾಗುವ ಅನಾರೋಗ್ಯದ ಬಗ್ಗೆ ಚರ್ಚೆ ನಡೆಸಿ ಪ್ರತಿ ಕುಟುಂಬವೂ ವಾರ್ಷಿಕವಾಗಿ ಸರಾಸರಿ ಅನಾರೋಗ್ಯಕ್ಕೆ ಎಷ್ಟು ವೆಚ್ಚ ಮಾಡುತ್ತದೆ ಎಂಬುದರ ಬಗ್ಗೆ ಲೆಕ್ಕ ಮಾಡುವುದು (9).




ಮೂಲ : ಯೂನಿಸೆಫ್ **( UNICEF )**

# ಅಧ್ಯಾಯ – 5

## ಕಡಿಮೆ ವೆಚ್ಚದ ಶೌಚಾಲಯಗಳು

ಗ್ರಾಮೀಣ ಪ್ರದೇಶವನ್ನು ಸ್ವಚ್ಛವಾಗಿ ಇಡಲು ಹಾಗೆ ಸ್ವಚ್ಛ ಪರಿಸರವನ್ನು ನಿರ್ಮಿಸಲು ಹಾಗೂ ನಮ್ಮ ಸುತ್ತಮುತ್ತಲಿನ ಪರಿಸರವನ್ನು ಬಯಲು ಮಲ ಮುಕ್ತ ಪ್ರದೇಶವನ್ನಾಗಿಸುವುದು ಅತ್ಯಂತ ಅವಶ್ಯಕವಾಗಿದೆ. ಗ್ರಾಮೀಣ ವಿಭಾಗದ ಸಮುದಾಯವು ಶೌಚಾಲಯ ನಿರ್ಮಾಣಕ್ಕೆ ಹೆಚ್ಚಿನ ಹಣ ಬೇಕಾಗುತ್ತದೆ ಎಂದು ತಿಳಿದಿರುತ್ತಾರೆ ಹಾಗೂ ಶೌಚಾಲಯವನ್ನು ಅತ್ಯಂತ ಕಡಿಮೆ ವೆಚ್ಚದಲ್ಲಿ ಕಟ್ಟಬೇಕೆಂದು ಆಶಿಸುತ್ತಾರೆ. ಈ ಕೈಪಿಡಿಯಲ್ಲಿ ಕಡಿಮೆ ವೆಚ್ಚದ ಶೌಚಾಲಯವನ್ನು ಯಾವ ರೀತಿ ನಿರ್ಮಾಣ ಮಾಡಬೇಕು ಎನ್ನುವ ಬಗ್ಗೆ ಅತ್ಯಂತ ಸರಳ ರೀತಿಯಲ್ಲಿ ಮಾಹಿತಿ ನೀಡಲಾಗಿದೆ.

ಶೌಚಾಲಯವನ್ನು ನಿರ್ಮಾಣ ಮಾಡುವಾಗ ಈ ಕೆಳಕಂಡ ಅಂಶಗಳನ್ನು ಗಮನದಲ್ಲಿಟ್ಟು ಕೊಳ್ಳುವುದು ಅವಶ್ಯಕವಾಗಿದೆ.

- ಶೌಚಾಲಯದ ಗುಂಡಿಯನ್ನು ಕುಡಿಯುವ ನೀರಿನ ಮೂಲದಿಂದ 10–15 ಮೀಟರ್ ದೂರ ನಿರ್ಮಾಣ ಮಾಡುವ ಅವಶ್ಯಕತೆ ಇದೆ, ಇಲ್ಲದಿದ್ದಲ್ಲಿ ಗುಂಡಿಯಲ್ಲಿ ಇರುವಂತಹ ಮಲವು ಕುಡಿಯುವ ನೀರಿನ ಮೂಲಕ್ಕೆ ಸೇರಿಕೊಳ್ಳುವ ಸಾಧ್ಯತೆ ಹೆಚ್ಚಿರುತ್ತದೆ.
- ಸೊಳ್ಳೆ, ನೊಣ ಮತ್ತು ಪ್ರಾಣಿಗಳಿಂದ ಮಲ ದೂರವಿರಿಸುವ ಸಲುವಾಗಿ ಶೌಚಾಲಯದ ಗುಂಡಿ ನಿರ್ಮಾಣಗೊಂಡ ನಂತರ ಗುಂಡಿಯನ್ನು ಮುಚ್ಚಬೇಕು.
- ಪರಿಸರವನ್ನು ಮಲಿನಗೊಳಿಸಬಾರದು.
- ಸಮುದಾಯಕ್ಕೆ ಕೈಗೆಟುಕುವ ದರದಲ್ಲಿ ಶೌಚಾಲಯ ನಿರ್ಮಾಣವಾಗಬೇಕು.
- ಶೌಚಾಲಯವು ಸುಲಭವಾಗಿ ಉಪಯೋಗ ಮಾಡುವಂತೆ ಇರಬೇಕು.
- ಶೌಚಾಲಯವು ಬಿಸಿಲು, ಮಳೆ ಮತ್ತು ಗಾಳಿಯಿಂದ ರಕ್ಷಿಸುವಂತೆ ಇರಬೇಕು.
- ಮಲ ಹೊರುವ ಪದ್ಧತಿಯನ್ನು ಉತ್ತೇಜಿಸುವಂತೆ ಇರಬಾರದು.
- ಮಹಿಳೆಯರು, ಮಕ್ಕಳು, ವಿಕಲಚೇತನರು, ಹಿರಿಯ ನಾಗರೀಕರು ಮತ್ತು ಮಾನಸಿಕ ಅಸ್ವಸ್ಥರು ಸಹ ಸುಲಭ ರೀತಿಯಲ್ಲಿ ಉಪಯೋಗ ಮಾಡುವಂತೆ ಇರಬೇಕು.

## ಶೌಚಾಲಯ ನಿರ್ಮಾಣ ಮತ್ತು ತಾಂತ್ರಿಕ ಮಾಹಿತಿ

ಕಡಿಮೆ ವೆಚ್ಚದ ಶೌಚಾಲಯ ನಿರ್ಮಾಣದ ಬಗ್ಗೆ ಮಾಹಿತಿ ತಿಳಿದುಕೊಳ್ಳುವುದು ಅತ್ಯಂತ ಅವಶ್ಯಕವಾಗಿದೆ. ಕೆಲವೊಂದು ತಾಂತ್ರಿಕ ಮಾಹಿತಿಯನ್ನು ಕೆಳಗೆ ನೀಡಲಾಗಿದೆ.

## ಶೌಚಾಲಯ ಗುಂಡಿ ಮಾದರಿಗಳು

- ಸ್ಥಳೀಯವಾಗಿ ಸಿಗುವ ಕಲ್ಲುಗಳಿಂದ ನಿರ್ಮಾಣ ಮಾಡುವುದು.
- ಇಟ್ಟಿಗೆ ಉಪಯೋಗಿಸಿ ಶೌಚಾಲಯ ನಿರ್ಮಾಣ ಮಾಡುವುದು.
- ಸಿಮೆಂಟಿನ ರಿಂಗ್ ಉಪಯೋಗಿಸಿ ಗುಂಡಿ ನಿರ್ಮಾಣ ಮಾಡುವುದು.

## ಕಲ್ಲುಗಳಿಂದ ಶೌಚಾಲಯ ಗುಂಡಿ ನಿರ್ಮಾಣ

ಈ ರೀತಿಯ ಶೌಚಾಲಯ ನಿರ್ಮಾಣ ಮಾದರಿಯು ಅತ್ಯಂತ ಸುಲಭ ಮತ್ತು ಕಡಿಮೆ ವೆಚ್ಚದ ಶೌಚಾಲಯದ ಗುಂಡಿ ನಿರ್ಮಾಣ ವ್ಯವಸ್ಥೆಯಾಗಿದ್ದು ಬೇಕಾಗುವ ಸಾಮಾಗ್ರಿಗಳು ಈ ಕೆಳಕಂಡಂತೆ ಇರುತ್ತದೆ.




ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕಿನ ದವಡಬೆಟ್ಟ ಹಳ್ಳಿ ದಿನಾಂಕ :- 15.09.2011 & 16.09.2011

## ಉಪಯೋಗಗಳು

- ಅತ್ಯಂತ ಸರಳ ರೀತಿಯ ಶೌಚಾಲಯದ ಗುಂಡಿಗಳು .
- ಸಿಮೆಂಟ್ ಮತ್ತು ಕಲ್ಲಿನ ಅವಶ್ಯಕತೆ ಇರುವುದಿಲ್ಲ.
- ಯಾವುದೇ ಗಾರೆ ಕೆಲಸಗಾರರು ಅಥವಾ ಗೌಂಡಿಯ ಅವಶ್ಯಕತೆ ಇರುವುದಿಲ್ಲ.
- ಇಂಗುಗುಂಡಿ ಮಾದರಿ ಇರುವುದರಿಂದ ಮಲದಲ್ಲಿನ ನೀರು ಭೂಮಿಯಲ್ಲಿ ಇಂಗಿಸಲಾಗುತ್ತದೆ ಹಾಗಾಗಿ ಶೌಚಾಲಯ ಗುಂಡಿ ತುಂಬಲು ಸಮಯ ಬೇಕಾಗುತ್ತದೆ.

| ಕ್ರಮ | ಸಾಮಾಗ್ರಿಗಳು | ಸಂಖ್ಯೆ |
|---|---|---|
| 1 | ಕಲ್ಲು | 130–140 |
| 2 | ಅಳತೆ | 3.5 × 3.5 ಅಡಿ |
| 3 | ಕೂಲಿ | 2 ಕೂಲಿ |
| 4 | ಗುಂಡಿ | ಗೋಲಾಕಾರ |

## ನಿಬಂಧನೆಗಳು

- ಗುಂಡಿಯನ್ನು ನೀರಿನ ಮೂಲದಿಂದ 10–15 ಮೀಟರ್ ದೂರದಲ್ಲಿ ನಿರ್ಮಾಣ ಮಾಡತಕ್ಕದ್ದು ಇಲ್ಲದೇ ಇದ್ದರೆ ಮಲವು ಕುಡಿಯುವ ನೀರಿಗೆ ಸೇರುವ ಸಾಧ್ಯತೆ ಇರುತ್ತದೆ.
- ನೀರಿನ ಪ್ರಮಾಣ ಹೆಚ್ಚಾಗಿರುವ ಜಾಗದಲ್ಲಿ ಗುಂಡಿ ನಿರ್ಮಿಸಿದಲ್ಲಿ ಗುಂಡಿಗೆ ನೀರು ತುಂಬುವ ಸಾಧ್ಯತೆ ಹೆಚ್ಚು.
- ಬಂಡೆ ಕಲ್ಲು ಇರುವ ಜಾಗದಲ್ಲಿ ಈ ರೀತಿ ಶೌಚಾಲಯ ನಿರ್ಮಾಣ ಸಾಧ್ಯವಾಗುವುದಿಲ್ಲ.

## ಇಟ್ಟಿಗೆಯಿಂದ ಶೌಚಾಲಯ ಗುಂಡಿ ನಿರ್ಮಾಣ




ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕಿನ ದವಡಬೆಟ್ಟ ಹಳ್ಳಿ ದಿನಾಂಕ :– 15.09.2011 & 16.09.2011

## ಉಪಯೋಗಗಳು

- ಅತ್ಯಂತ ಸರಳ ರೀತಿಯ ಶೌಚಾಲಯದ ಗುಂಡಿಗಳು
- ಇಂಗುಗುಂಡಿ ಮಾದರಿ ಗುಂಡಿ ಆಗಿರುವುದರಿಂದ ಮಲದಲ್ಲಿನ ನೀರು ಭೂಮಿಯಲ್ಲಿ ಇಂಗಿಸಲಾಗುತ್ತದೆ
- ಗುಂಡಿ ತುಂಬಿದ ಮೇಲೆ ಮಲ ತುಂಬಿದ ಗುಂಡಿಯನ್ನು ಮುಚ್ಚಿ 6–8 ತಿಂಗಳ ನಂತರ ಆ ಗುಂಡಿಯಲ್ಲಿ ಇರುವಂತಹ ತ್ಯಾಜ್ಯ ಅಪಾಯರಹಿತವಾಗಿರುತ್ತದೆ ನಂತರ ಇದನ್ನು ಗೊಬ್ಬರವನ್ನಾಗಿ ಉಪಯೋಗಿಸಬಹುದು.

| ಕ್ರಮ | ಸಾಮಾಗ್ರಿಗಳು | ಸಂಖ್ಯೆ |
|---|---|---|
| 1 | ಇಟ್ಟಿಗೆ | 120–130 |
| 2 | ಸಿಮೆಂಟ್ | 35–40 ಕೆ.ಜಿ |
| 3 | ಮರಳು | 1 ಬಾಂಡ್ಲಿ ಸಿಮೆಂಟ್‌ಗೆ 5 ಬಾಂಡ್ಲಿ ಮರಳು |
| 4 | ಅಳತೆ | 3.5 × 3.5 ಅಡಿ |
| 5 | ಕೂಲಿ | 1 ಕೂಲಿ |
| 6 | ಗಾರೆ ಕೆಲಸಗಾರರು | 1 |
| 7 | ಗುಂಡಿ | ಗೋಲಾಕಾರ |

## ನಿಬಂಧನೆಗಳು

- ಗುಂಡಿಯನ್ನು ನೀರಿನ ಮೂಲದಿಂದ 10–15 ಮೀಟರ್ ದೂರ ನಿರ್ಮಾಣ ಮಾಡದೇ ಇದ್ದಲ್ಲಿ ಮಲವು ಕುಡಿಯುವ ನೀರಿಗೆ ಸೇರುವ ಸಾಧ್ಯತೆ ಹೆಚ್ಚಿರುತ್ತದೆ.
- ನೀರಿನ ಪ್ರಮಾಣ ಹೆಚ್ಚಾಗಿರುವ ಜಾಗದಲ್ಲಿ ಶೌಚಾಲಯದ ಗುಂಡಿ ನಿರ್ಮಿಸಿದಲ್ಲಿ ಗುಂಡಿಗೆ ನೀರು ತುಂಬುವ ಸಾಧ್ಯತೆ ಹೆಚ್ಚು.
- ಬಂಡೆ ಕಲ್ಲು ಇರುವ ಜಾಗದಲ್ಲಿ ಈ ರೀತಿ ಶೌಚಾಲಯ ನಿರ್ಮಾಣ ಸಾಧ್ಯವಾಗುವುದಿಲ್ಲ.
- ಕಲ್ಲಿನ ಗುಂಡಿ ಮಾದರಿಗಿಂತ ಸ್ವಲ್ಪ ಹೆಚ್ಚಿನ ಹಣ ಬೇಕಾಗುತ್ತದೆ.
- ಗುಂಡಿ ಕಟ್ಟುವಾಗ 2 ಇಟ್ಟಿಗೆಗಳ ನಡುವೆ ಎರಡು ಇಂಚಿನಷ್ಟು ಜಾಗ ಬಿಡದೇ ಇದ್ದಲ್ಲಿ ನೀರು ಇಂಗುವ ಸಾಧ್ಯತೆ ಕಡಿಮೆ ಇರುತ್ತದೆ ಹಾಗೂ ಇದರಿಂದ ಶೌಚಾಲಯದ ಗುಂಡಿ ಬೇಗ ತುಂಬುವ ಸಾಧ್ಯತೆ ಹೆಚ್ಚಾಗಿ ಇರುತ್ತದೆ.
- ಗೌಂಡಿಗಳ ಅಗತ್ಯತೆ ಇರುವುದರಿಂದ ಸ್ವಲ್ಪ ಖರ್ಚು–ವೆಚ್ಚ ಹೆಚ್ಚಾಗಬಹುದು.

## ಸಿಮೆಂಟ್ ರಿಂಗ್‌ನಿಂದ ನಿರ್ಮಾಣವಾದ ಶೌಚಾಲಯದ ಗುಂಡಿ.





ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕಿನ ದವಡಬೆಟ್ಟ ಹಳ್ಳಿ ದಿನಾಂಕ :- 15.09.2011 & 16.09.2011

| ಕ್ರಮ | ಸಾಮಾಗ್ರಿಗಳು | ಸಂಖ್ಯೆ |
|---|---|---|
| 1 | ಸಿಮೆಂಟಿನ ರಿಂಗ್ | 3.5 ಅಡಿ ಅಥವಾ 3 ಅಡಿ ಆಳತೆಯ 3 ರಿಂದ 4 ರಿಂಗ್‌ಗಳು |
| 2 | ಅಳತೆ | 3.5×3.5 ಅಡಿ |
| 3 | ಕೂಲಿ | 2 ಕೂಲಿ |
| 4 | ಗುಂಡಿ | ಗೋಲಾಕಾರ |

### ಉಪಯೋಗಗಳು

- ಸಿಮೆಂಟ್ ಮತ್ತು ಕಲ್ಲಿನ ಅವಶ್ಯಕತೆ ಇರುವುದಿಲ್ಲ.
- ಯಾವುದೇ ಗಾರೆ ಕೆಲಸಗಾರ ಅಥವಾ ಗೌಂಡಿಯ ಅವಶ್ಯಕತೆ ಇರುವುದಿಲ್ಲ.
- ಇಂಗುಗುಂಡಿ ಮಾದರಿಯಲ್ಲಿ ರಿಂಗ್‌ಗಳ ಮಧ್ಯ ಜಾಗ ಬಿಟ್ಟಿರುವುದರಿಂದ ಮಲದಲ್ಲಿನ ನೀರು ಭೂಮಿಯಲ್ಲಿ ಇಂಗಿಸಲಾಗುತ್ತದೆ.
- ಸಿಮೆಂಟ್ ರಿಂಗ್‌ಗಳನ್ನು ಕೂಡಿಸುವಾಗ 2 ರಿಂಗ್‌ಗಳ ಮಧ್ಯೆ ಜಾಗ ಬಿಡುವುದು ಅಥವಾ ರಿಂಗ್‌ಗಳನ್ನು ತಯಾರಿಸುವಾಗಲೇ 8 ರಿಂದ 10 ತೂತುಗಳನ್ನು ಕೊರೆಯುವುದರಿಂದ ಮಲದಲ್ಲಿನ ನೀರು ಸುಲಭವಾಗಿ ಭೂಮಿಯಲ್ಲಿ ಇಂಗುತ್ತದೆ.

### ನಿಬಂಧನೆಗಳು

- ಗುಂಡಿಯು ನೀರಿನ ಮೂಲದಿಂದ 10–15 ಮಿಟರ್ ದೂರ ನಿರ್ಮಾಣ ಮಾಡತಕ್ಕದ್ದು ಇಲ್ಲದೇ ಇದ್ದರೆ ಮಲವು ಕುಡಿಯುವ ನೀರಿಗೆ ಸೇರುವ ಸಾಧ್ಯತೆ ಹೆಚ್ಚಾಗಿ ಇರುತ್ತದೆ.
- ನೀರಿನ ಪ್ರಮಾಣ ಹೆಚ್ಚಾಗಿರುವ ಜಾಗದಲ್ಲಿ ಗುಂಡಿ ನಿರ್ಮಿಸಿದಲ್ಲಿ ಗುಂಡಿಗೆ ನೀರು ತುಂಬುವ ಸಾಧ್ಯತೆ ಹೆಚ್ಚಾಗಿರುತ್ತದೆ.
- ಬಂಡೆ ಕಲ್ಲು ಇರುವ ಜಾಗದಲ್ಲಿ ಈ ರೀತಿ ಶೌಚಾಲಯ ನಿರ್ಮಾಣ ಸಾಧ್ಯವಾಗುವುದಿಲ್ಲ.
- ಗುಂಡಿಗಳನ್ನು ಇಳಿಸುವಾಗ ಅಥವಾ ಜೋಡಿಸುವಾಗ ಜಾಗೃತೆಯಿಂದ ಇರುವುದು ಅಗತ್ಯ ತಪ್ಪಿದಲ್ಲಿ ಸಿಮೆಂಟ್ ರಿಂಗುಗಳು ಒಡೆಯುವ ಸಾಧ್ಯತೆ ಹೆಚ್ಚಾಗಿ ಇರುತ್ತದೆ.

## ಬುನಾದಿ ಹಾಗೂ ಬೇಸ್ ಮೆಂಟ್ ನಿರ್ಮಾಣ








ಬೂದಿಹಾಳ ಗ್ರಾಮ, ಬಾದಾಮಿ ತಾಲ್ಲೂಕು ಗಾರೆ ಕೆಲಸಗಾರರ ತರಬೇತಿಯ ನಂತರ ನಿರ್ಮಾಣವಾದ ಶೌಚಾಲಯ ದಿನಾಂಕ :- 13.06.2010 ರಿಂದ 14.06.2010


| ಕ್ರಮ | ಸಾಮಾಗ್ರಿಗಳು | ಸಂಖ್ಯೆ |
|---|---|---|
| 1 | ಪ್ಯಾನ್ ಮತ್ತು ಪಿ ಟ್ರಾಪ್ | 1 |
| 2 | ಇಟ್ಟಿಗೆ | 90–100 |
| 3 | ಕಲ್ಲುಗಳು ಬುನಾದಿಗೆ | 30 – 40 |
| 4 | ಸಿಮೆಂಟ್ | 1 ಮೂಟೆ |
| 5 | ಮರಳು | 1:5 ಅನುಪಾತ ಸಿಮೆಂಟ್ ಮತ್ತು ಮರಳು |
| 6 | ಗೌಂಡಿ/ ಗಾರೆ ಕೆಲಸಗಾರರು | 1 |
| 7 | ಕೈ ಆಳು | 1 |
| 8 | ಪ್ಯಾಕಿಂಗ್ | ಸಣ್ಣ ಕಲ್ಲು ಅಥವಾ ಇಟ್ಟಿಗಿ ಚೂರುಗಳು |
| 9 | 7–8 ದಿವಸ ಕ್ಯೂರಿಂಗ್ | |

## ಕಡಿಮೆ ವೆಚ್ಚದ ಶೌಚಾಲಯ ಗೋಡೆ ಮಾದರಿಗಳು

ಮನೆಯ ಒಳಗಡೆ ಶೌಚಾಲಯ ನಿರ್ಮಾಣ ಮಾಡುವುದರಿಂದ ಕೇವಲ ಒಂದು ಗೋಡೆಯನ್ನು ಕಟ್ಟಬಹುದಾಗಿದೆ. ಇದರಿಂದ 2 ಗೋಡೆಗಳನ್ನು ಕಟ್ಟುವ ಹಣ ಉಳಿತಾಯ ಹಾಗೂ ಶೌಚಾಲಯಕ್ಕೆ ಮೇಲಿನ ಮಾಡು ಹಾಕುವ ಅವಶ್ಯಕತೆ ಇರುವುದಿಲ್ಲ. ಸೂಕ್ತ ರೀತಿಯಲ್ಲಿ ಯೋಜನೆ ರೂಪಿಸಿದಲ್ಲಿ ಹಾಗೂ ಸಂಬಂಧಪಟ್ಟ ಕುಟುಂಬದ ಒಪ್ಪಿಗೆ ಇದ್ದಲ್ಲಿ ಈ ಮಾದರಿಯ ಶೌಚಾಲಯ ಕಟ್ಟುವುದು ಸೂಕ್ತವಾಗಿರುತ್ತದೆ






ಮನೆಯ ಒಳಗಡೆ ಶೌಚಾಲಯ ನಿರ್ಮಾಣ




ಮನೆಯ ಒಳಗಡೆ ಜಾಗ ಇದ್ದಲ್ಲಿ ಶೌಚಾಲಯದ ಜೊತೆಯಲ್ಲಿ ಸ್ನಾನದ ಕೋಣೆ ಸಹ ಕಟ್ಟಬಹುದಾಗಿದೆ. ಒಂದು ಶೌಚಾಲಯದ ಗೋಡೆ ಜೊತೆ ಇನ್ನೊಂದು ಗೋಡೆ ಕಟ್ಟಿದರೆ ಸ್ನಾನದ ಮನೆ ಜೊತೆಯಲ್ಲಿ ಶೌಚಾಲಯ ಸಹ ನಿರ್ಮಾಣವಾಗುತ್ತದೆ.

ಮನೆಯ ಹೊರಗಡೆ ಗೋಡೆಗೆ ಅಂಟಿಕೊಂಡಂತೆ ಈ ಮಾದರಿಯ ಶೌಚಾಲಯಗಳನ್ನು ನಿರ್ಮಾಣ ಮಾಡಬಹುದಾಗಿದೆ. ಈ ಮಾದರಿ ಶೌಚಾಲಯದಲ್ಲಿ 2 ಗೋಡೆಗಳು ಹಾಗೂ ಶೌಚಾಲಯದ ಮೇಲೆ ಹೊದಿಕೆಯ ಅವಶ್ಯಕತೆ ಇರುತ್ತದೆ.





ಮನೆಯ ಹೊರಗಡೆ ಖಾಲಿ ಜಾಗದ ಲಭ್ಯತೆಗನುಗುಣವಾಗಿ ಈ ಮಾದರಿಯ ಶೌಚಾಲಯಗಳನ್ನು ನಿರ್ಮಾಣ ಮಾಡಬಹುದಾಗಿದೆ. ಈ ಮಾದರಿಯ ಶೌಚಾಲಯದ ಉಪಯೋಗವೆಂದರೆ ಗ್ರಾಮೀಣ ವಿಭಾಗದಲ್ಲಿ ವಾಸ ಮಾಡುವ ಜನರು ಶೌಚಾಲಯದ ಜೊತೆಯಲ್ಲಿ ಸ್ನಾನದ ಮನೆಯನ್ನು ಸಹ ನಿರ್ಮಿಸಿ ಉಪಯೋಗಿಸಬಹುದಾಗಿದೆ

ಈ ಮಾದರಿಯ ಶೌಚಾಲಯವನ್ನು ಕಟ್ಟುವಾಗ 2 ಹೊಸ ಗೋಡೆಗಳನ್ನು ನಿರ್ಮಾಣ ಮಾಡುವ ಅವಶ್ಯಕತೆ ಇರುತ್ತದೆ.

ಈ ತರಹದ ಶೌಚಾಲಯಗಳನ್ನು ಮನೆಯ ಮುಂದೆ ಅಥವಾ ಹಿಂದೆ ಜಾಗವಿದ್ದಲ್ಲಿ ನಿರ್ಮಾಣ ಮಾಡಾಬಹುದಾಗಿರುತ್ತದೆ.



# ಅಧ್ಯಾಯ – 6

## ಪರಿಸರ ಸ್ನೇಹಿ – ಶೌಚಾಲಯ


ಪರಿಸರ ಸ್ನೇಹಿ–ಶೌಚಾಲಯಗಳು ಪುನರ್‌ಬಳಕೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತದೆ. ಮಾನವ ಮಲ ಮತ್ತು ಮೂತ್ರಗಳಲ್ಲಿ ಸಾರಜನಕ (ನೈಟ್ರೋಜನ್), ರಂಜಕ (ಪಾಸ್ಫರಸ್) ಮತ್ತು ಪೋಟ್ಯಾಶಿಯಂ ಅಂತಹ ಅಂಶಗಳು ಇದ್ದು ಇವುಗಳು ಕೃಷಿಗೆ ಅತ್ಯಮೂಲ್ಯ ವಸ್ತುಗಳಾಗಿದೆ. ಈ ಅಂಶವನ್ನು ಕಂಡುಕೊಂಡು ಹಲವಾರು ದೇಶಗಳು ಪರಿಸರ ಸ್ನೇಹಿ – ಶೌಚಾಲಯ ನಿರ್ಮಾಣ ಮಾಡಲು ಸಮುದಾಯಕ್ಕೆ ಸಹಾಯ ಮಾಡುತ್ತಿವೆ. ಭಾರತ ದೇಶದಲ್ಲಿ ಪರಿಸರ ಸ್ನೇಹಿ ಶೌಚಾಲಯಗಳ ಬಗ್ಗೆ ಅರಿವು ಕಡಿಮೆ ಇದ್ದು ಜನರು ಇಂದಿಗೂ ಸಹ ಬಯಲು ಮಲ ವಿಸರ್ಜನೆ ಹಾಗೂ ಇಂಗು ಗುಂಡಿ ಮಾದರಿ ಶೌಚಾಲಯಗಳಿಗೆ ಅವಲಂಬಿತರಾಗಿದ್ದಾರೆ (3).

## ಇಂಗು ಗುಂಡಿ ಶೌಚಾಲಯ ಹಾಗೂ ಪರಿಸರ ಸ್ನೇಹಿ ಶೌಚಾಲಯಗಳು.

ಗ್ರಾಮೀಣ ಪ್ರದೇಶದಲ್ಲಿ ನಮಗೆ ಹೆಚ್ಚಾಗಿ ಕಂಡುಬರುವ ಶೌಚಾಲಯಗಳೆಂದರೆ ಇಂಗು ಗುಂಡಿ ಮಾದರಿಯ ಶೌಚಾಲಯಗಳು. ಈ ಮಾದರಿ ಶೌಚಾಲಯಗಳು ಎಲ್ಲಾ ವಾತಾವರಣದಲ್ಲಿ ಸೂಕ್ತ ಎಂದು ಹೇಳಲಾಗುವುದಿಲ್ಲ. ಇಂಗು ಗುಂಡಿ ಮಾದರಿಯ ಶೌಚಾಲಯಗಳಲ್ಲಿ ಮಲ ಮತ್ತು ಮೂತ್ರ ಒಂದೇ ಗುಂಡಿಗೆ ಹೋಗುವುದರಿಂದ ಮಲ–ಮೂತ್ರದಲ್ಲಿನ ಸತ್ವಗಳ ಒಟ್ಟಿಗೆ ಸೇರಿ ಹೋಗುವುದರಿಂದ ಮೂತ್ರದಲ್ಲಿನ ಅಂಶಗಳು ಭೂಮಿಯಲ್ಲಿ ಇಂಗಿ ಹೋಗುತ್ತದೆ ಅಥವಾ ಮಲದೊಂದಿಗೆ ಬೆರೆತು ಗೊಬ್ಬರವಾಗಿ ಪರಿವರ್ತನೆಗೊಳ್ಳುತ್ತದೆ . ಇಂಗು ಗುಂಡಿ ಮಾದರಿಯ ಶೌಚಾಲಯಗಳ ಪದ್ಧತಿಯಲ್ಲಿನ ಅಡೆತಡೆಗಳ ಬಗ್ಗೆ ನಾವುಗಳು ಈ ರೀತಿಯಲ್ಲಿ ಪಟ್ಟಿ ಮಾಡಬಹುದಾಗಿದೆ (3).

- ಶೌಚಾಲಯದ ಗುಂಡಿ ತುಂಬಿದ ನಂತರ ಗುಂಡಿಗಳನ್ನು ಖಾಲಿ ಮಾಡಲು ಸ್ವಚ್ಛತಾ ಕಾರ್ಯಕರ್ತರ / ಪೌರ ಕಾರ್ಮಿಕರ ಸಹಾಯ ಪಡೆಯುವ ಸಾಧ್ಯತೆ ಹೆಚ್ಚಾಗಿರುತ್ತದೆ. ಇದರಿಂದ ತಲೆ ಮೇಲೆ ಮಲ ಹೊರುವ ಪದ್ಧತಿ ಹೆಚ್ಚಾಗುವ ಸಾಧ್ಯತೆ ಇರುತ್ತದೆ.
- ತೇವಾಂಶ ಮತ್ತು ನೀರಿನ ಅಂಶ ಹೆಚ್ಚಾಗಿರುವ ಜಾಗದಲ್ಲಿ ಈ ಮಾದರಿ ಶೌಚಾಲಯಗಳು ಸೂಕ್ತವಾಗಿರುವುದಿಲ್ಲ ಇಂತಹ ಪ್ರದೇಶದಲ್ಲಿ ಪರಿಸರ ಸ್ನೇಹಿ ಶೌಚಾಲಯಗಳು ಸೂಕ್ತವಾಗಿರುತ್ತದೆ.
- ಕುಡಿಯುವ ನೀರಿನ ಮೂಲದಿಂದ 10–15 ಮೀಟರ್ ದೂರ ಗುಂಡಿ ನಿರ್ಮಾಣ ಮಾಡದಿದ್ದಲ್ಲಿ ಕುಡಿಯುವ ನೀರಿಗೆ ಮಲ–ಮೂತ್ರ ಸೇರುವ ಸಾಧ್ಯತೆಗಳು ಹೆಚ್ಚಾಗಿರುತ್ತದೆ.
- ಮಲ–ಮೂತ್ರದಲ್ಲಿನ ಸತ್ವಗಳು ಸರಿಯಾದ ರೀತಿಯಲ್ಲಿ ಉಪಯೋಗಕ್ಕೆ ಬಾರದೆ ಇರುವ ಸಾಧ್ಯತೆ ಹೆಚ್ಚಾಗಿ ಇರುತ್ತದೆ.

## ಸಾಮಾನ್ಯ ಶೌಚಾಲಯ/ ಇಂಗು ಗುಂಡಿ ಮಾದರಿಯ ಶೌಚಾಲಯ




ನಮ್ಮ ದೇಶದ ಗ್ರಾಮೀಣ ವಿಭಾಗದಲ್ಲಿ ಮಲ ಮೂತ್ರವೆಂದರೆ ಸಮುದಾಯದಲ್ಲಿ ಒಂದು ರೀತಿಯ ತಿರಸ್ಕಾರದ ವಿಷಯವಾಗಿರುತ್ತದೆ. ನಮ್ಮ ಮಲ-ಮೂತ್ರದಲ್ಲಿ ಸಾರಜನಕ (ನೈಟ್ರೋಜನ್), ರಂಜಕ (ಫಾಸ್ಫರಸ್) ಮತ್ತು ಪೋಟ್ಯಾಶಿಯಂ ಅಂತಹ ಅಂಶಗಳು ಇದ್ದು ಸಾಮಾನ್ಯ ಶೌಚಾಲಯಗಳು ಅಥವಾ ಇಂಗು ಗುಂಡಿ ಮಾದರಿಯ ಶೌಚಾಲಯಗಳಿಂದ ಈ ಅಂಶಗಳು ಅಷ್ಟಾಗಿ ಉಪಯೋಗಕ್ಕೆ ಬರಲು ಸಾಧ್ಯವಾಗಿರುವುದಿಲ್ಲ.

## ಪರಿಸರ ಸ್ನೇಹಿ ಶೌಚಾಲಯ

ಪರಿಸರ ಸ್ನೇಹಿ ಶೌಚಾಲಯದ ಪ್ಯಾನ್‌ನಲ್ಲಿ ವಿಸರ್ಜಿಸಿದ ಮಲ-ಮೂತ್ರ ಹಾಗೂ ತ್ಯಾಜ್ಯ ನೀರು ಹೋಗಲು ವಿವಿಧ ಘಟಕಗಳು ಇರುತ್ತವೆ. ಈ ವ್ಯವಸ್ಥೆಯಿಂದಾಗಿ ಮಲ-ಮೂತ್ರವು ಬೇರೆ-ಬೇರೆಯಾಗಿ ಶೇಖರಣೆಗೊಳ್ಳುತ್ತವೆ. ಗುಂಡಿಯಲ್ಲಿ ತುಂಬಿದ ಮಲ ಹಾಗೂ ಶೇಖರಿಸಿದ ಮೂತ್ರ ತುಂಬಿದ ಕೆಲವು ಸಮಯದ ನಂತರ ಕೃಷಿ ಭೂಮಿಗೆ ಉಪಯೋಗಿಸಬಹುದಾಗಿದೆ. ಇದರಿಂದಾಗಿ ನಮ್ಮ ಮಲ-ಮೂತ್ರವನ್ನು ಒಳ್ಳೆಯ ಗೊಬ್ಬರವನ್ನಾಗಿ ಉಪಯೋಗಿಸಬಹದಾಗಿದೆ (3).






### ಮಲ ಮೂತ್ರದಲ್ಲಿ ಇರುವಂತಹ ಪೌಷ್ಠಿಕಾಂಶಗಳು (1 ಕೆ.ಜಿ ಮೂತ್ರ ಹಾಗೂ 150 ಗ್ರಾಂ ಮಲಕ್ಕೆ ಅಂದಾಜು)

| | ಸಾರಜನಕ (ನೈಟ್ರೋಜನ್) | ರಂಜಕ (ಫಾಸ್ಫರಸ್) | ಪೋಟ್ಯಾಶಿಯಂ |
|---|---|---|---|
| ಮೂತ್ರ (ಗ್ರಾಂಗಳಲ್ಲಿ) | 11.0 | 1.0 | 2.0 |
| ಮಲ (ಗ್ರಾಂಗಳಲ್ಲಿ) | 1.5 | 0.5 | 1.5 |
| ಒಟ್ಟು | 12.5 | 1.5 | 3.5 |

Source: - http://www.nku.edu/~longa/haiti/kids/feces_value.html

# ಅಧ್ಯಾಯ – 7

## ತ್ಯಾಜ್ಯ ವಸ್ತುಗಳ ನಿರ್ವಹಣೆ

ಭಾರತ ದೇಶದ ಹೆಚ್ಚಿನ ಜನಸಂಖ್ಯೆ ಗ್ರಾಮೀಣ ವಿಭಾಗದಲ್ಲಿ ನೆಲೆಸಿರುತ್ತಾರೆ. ನಮ್ಮ ದೇಶದ ಗ್ರಾಮೀಣ ಪ್ರದೇಶದ ಜನರು ಕೃಷಿ ಚಟುವಟಿಕೆಗಳಲ್ಲಿ ಅವಲಂಬಿತರಾಗಿರುತ್ತಾರೆ. ಭಾರತ ದೇಶದಲ್ಲಿ ಕೃಷಿ ಕೈಗಾರಿಕೆಯು ಕಳೆದ ಮೂರು ದಶಕಗಳಿಂದ ತ್ವರಿತ ಗತಿಯಲ್ಲಿ ಮುಂದುವರೆದಿರುತ್ತದೆ. ಆದರೆ ಗ್ರಾಮೀಣ ವಿಭಾಗದಲ್ಲಿ ಉತ್ಪತ್ತಿಯಾಗುತ್ತಿರುವ ತ್ಯಾಜ್ಯವು ಹಲವಾರು ಸಾಂಕ್ರಾಮಿಕ ರೋಗ ಉತ್ಪತ್ತಿಗೆ ಮೂಲವಾಗುವುದರ ಜೊತೆಗೆ ಪರಿಸರ ಸಹ ಕಲುಷಿತಗೊಳ್ಳುತ್ತಿದೆ. ಒಂದು ಅಂದಾಜಿನ ಪ್ರಕಾರ ಗ್ರಾಮೀಣ ವಿಭಾಗದಲ್ಲಿ ಉತ್ಪತ್ತಿಯಾಗುವ ಶೇ.80 ರಷ್ಟು ತ್ಯಾಜ್ಯವು ಕೊಳೆಯುವ ತ್ಯಾಜ್ಯವಾಗಿದ್ದು ಸಮರ್ಪಕ ರೀತಿಯಲ್ಲಿ ನಿರ್ವಹಣೆಯಾಗದಿದಲ್ಲಿ ಪರಿಸರವು ಕಲುಷಿತಗೊಳ್ಳುವುದರ ಜೊತೆಗೆ ಸಾರ್ವಜನಿಕ ಆರೋಗ್ಯಕ್ಕೂ ಒಂದು ದೊಡ್ಡ ಸವಾಲಾಗಿರುತ್ತದೆ (4).

**ನಿರ್ಮಲ ಭಾರತ ಅಭಿಯಾನದ ಮಾರ್ಗಸೂಚಿ ಅನ್ವಯ ತ್ಯಾಜ್ಯ ವಸ್ತುಗಳ ನಿರ್ವಹಣೆಗೆ ಮೀಸಲಿಟ್ಟಿರುವ ಅನುದಾನದ ವಿವರ ಕೆಳಕಂಡಂತೆ ಇರುತ್ತದೆ (2).**


- **ಗರಿಷ್ಠ 150 ಕುಟುಂಬಗಳು ಇರುವ ಗ್ರಾಮ ಪಂಚಾಯತಿಗಳಿಗೆ ರೂ.7.0 ಲಕ್ಷ**
- **300 ಕುಟುಂಬಗಳು ಇರುವ ಗ್ರಾಮ ಪಂಚಾಯತಿಗಳಿಗೆ ರೂ.12.0 ಲಕ್ಷ**
- **500 ಕುಟುಂಬಗಳು ಇರುವ ಗ್ರಾಮ ಪಂಚಾಯತಿಗಳಿಗೆ ರೂ.15.0 ಲಕ್ಷ**
- **500 ಕುಟುಂಬಗಳು ಮೇಲೆಪಟ್ಟು ಇರುವ ಗ್ರಾಮ ಪಂಚಾಯತಿಗಳಿಗೆ ರೂ.20.0 ಲಕ್ಷ**

## ತ್ಯಾಜ್ಯ ವಸ್ತುಗಳಿಂದಾಗುವ ಅಡ್ಡ ಪರಿಣಾಮಗಳು

ಘನ ಮತ್ತು ದ್ರವ ತ್ಯಾಜ್ಯ ವಸ್ತುಗಳ ಸಮರ್ಪಕ ರೀತಿಯಲ್ಲಿ ವಿಲೇವಾರಿ ಆಗದಿರುವಂತಹ ಪಕ್ಷದಲ್ಲಿ ನಾವು ಎದುರಿಸುವ ಸವಾಲುಗಳು ಕೆಳಕಂಡಂತೆ ಇರುತ್ತದೆ.


- ಪರಿಸರ ಮಾಲಿನ್ಯ ಹೆಚ್ಚಾಗುತ್ತದೆ.
- ಕುಡಿಯುವ ನೀರು ಕಲುಷಿತಗೊಳ್ಳುತ್ತದೆ.
- ವಾಂತಿ– ಭೇದಿ, ತಲೆ ನೋವು, ಜ್ವರ, ಕಾಲರಾ, ಮಲೇರಿಯ ದಂತಹ ಕಾಯಿಲೆಗಳಿಗೆ ಸಮುದಾಯವು ತುತ್ತಾಗುತ್ತದೆ.
- ಪ್ಲಾಸ್ಟಿಕ್ ತ್ಯಾಜ್ಯವು ಭೂಮಿಯಲ್ಲಿ ಸೇರಿದರೆ ಅಂತರ್ಜಲವು ಕಲುಷಿತಗೊಳ್ಳುತ್ತದೆ
- ಗ್ರಾಮೀಣ ವಿಭಾಗದ ಜನರು ಹೆಚ್ಚಾಗಿ ಜಾನುವಾರುಗಳನ್ನು (ಮುಖ್ಯವಾಗಿ ಹಸು, ಎಮ್ಮೆ ಇತ್ಯಾದಿ) ಸಾಕುವುದರಿಂದ ಅವುಗಳ ಸೆಗಣಿಯಿಂದ ಮಿಥೇನ್ ಎಂಬ ಅನಿಲವು ಹೊರಬರುತ್ತದೆ ಹಾಗೂ ಜಾಗತಿಕ ಮಟ್ಟದಲ್ಲಿ ಭೂಮಿಯ ತಾಪಮಾನವು ಹೆಚ್ಚಾಗಲು ಮಿಥೇನ್ ಅನಿಲವು ಸಹ ಕೊಡುಗೆ ನೀಡುತ್ತದೆ.

## ತ್ಯಾಜ್ಯವಸ್ತುಗಳ ವಿಂಗಡನೆ





ಸಾಮಾನ್ಯವಾಗಿ ತ್ಯಾಜ್ಯ ವಸ್ತುಗಳನ್ನು ಘನ ಮತ್ತು ದ್ರವ ತ್ಯಾಜ್ಯ ಎಂದು ವಿಂಗಡಿಸಬಹುದಾಗಿದೆ. ಘನ ತ್ಯಾಜ್ಯದಲ್ಲಿ ಕೊಳೆಯುವ ಹಾಗೂ ಕೊಳೆಯದಿರುವ ತ್ಯಾಜ್ಯ ಎಂದು ಪುನರ್ ವಿಂಗಡನೆ ಮಾಡಲಾಗುತ್ತದೆ. ಕೊಳೆಯುವ ತ್ಯಾಜ್ಯಗಳಲ್ಲಿ ಅಡುಗೆ ಮನೆಗಳಲ್ಲಿ ಉತ್ಪತ್ತಿಯಾಗುವಂತಹ ತ್ಯಾಜ್ಯಗಳಾದ ಆಹಾರ ತ್ಯಾಜ್ಯ, ತರಕಾರಿ ತ್ಯಾಜ್ಯ, ಮರಗಿಡಗಳ ಎಲೆಗಳು, ಜಾನವಾರುಗಳ ಸಗಣಿ ತ್ಯಾಜ್ಯ, ಹಣ್ಣಿನ ತ್ಯಾಜ್ಯ ಇತರೆಗಳನ್ನು ನೋಡಬಹುದಾಗಿದೆ ಈ ತ್ಯಾಜ್ಯಗಳನ್ನು ಭೂಮಿಯಲ್ಲಿ ಇರುವ ಸೂಕ್ಷ್ಮ ಜೀವಿಗಳು ಸುಲಭವಾಗಿ ಕೊಳೆಯುವಂತೆ ಮಾಡುತ್ತದೆ. ಆದುದರಿಂದ ಈ ತ್ಯಾಜ್ಯಗಳನ್ನು ಸರಿಯಾದ ರೀತಿಯಲ್ಲಿ ತಾಂತ್ರಿಕವಾಗಿ ನಿರ್ವಹಣೆ ಮಾಡಿದರೆ ಕೃಷಿಗೆ ಸಂಬಂಧಪಟ್ಟ ಗೊಬ್ಬರವನ್ನು ಪಡೆಯಬಹುದಾಗಿದೆ. ಘನ ತ್ಯಾಜ್ಯಗಳಲ್ಲಿ ಪ್ಲಾಸ್ಟಿಕ್, ರಬ್ಬರ್, ಗಾಜು ಹಾಗೂ ಇತರೇ ಕೊಳೆಯದಿರುವ ತ್ಯಾಜ್ಯಗಳು ಸಹ ಇದ್ದು ಇವುಗಳನ್ನು ಸೂಕ್ಷ್ಮ ಜೀವಿಗಳು ಸುಲಭವಾಗಿ ಕೊಳೆಯುವಂತೆ ಮಾಡಲು ಸಾಧ್ಯವಾಗುವುದಿಲ್ಲ ಆದುದರಿಂದ ಕೊಳೆಯದಿರುವ ತ್ಯಾಜ್ಯಗಳನ್ನು ಹೆಚ್ಚಾಗಿ ಪುನರ್‌ಬಳಕೆ ಮಾಡಲು ತಾಂತ್ರಿಕ ಮಾಹಿತ ಮತ್ತು ಉತ್ತೇಜನ ಅವಶ್ಯಕವಾಗಿರುತ್ತದೆ (4).

ತ್ಯಾಜ್ಯ ವಸ್ತುಗಳಲ್ಲಿ ದ್ರವ ತ್ಯಾಜ್ಯ ಮತ್ತೊಂದು ಅಪಾಯಕಾರಿ ವಸ್ತುವಾಗಿದ್ದು ದ್ರವ ತ್ಯಾಜ್ಯಗಳನ್ನು ಎರಡು ರೀತಿಯಲ್ಲಿ ವಿಂಗಡಿಸ ಬಹುದಾಗಿದೆ. ಮೊದಲನೆಯದಾಗಿ ದ್ರವ ತ್ಯಾಜ್ಯವು ಅಡುಗೆ ಮನೆ, ಬಚ್ಚಲು ಮನೆ, ಕಾರ್ಖಾನೆಗಳು, ಹಾಗೂ ಇತರೇ ಮೂಲದಿಂದ ಹೊರ ಬರುತ್ತವೆ ಈ ದ್ರವ ತ್ಯಾಜ್ಯವನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡುವ ಅವಶ್ಯಕತೆ ಇರುತ್ತದೆ. ಎರಡನೆಯದಾಗಿ ಶೌಚಾಲಯದಿಂದ ಸಹ ದ್ರವ ರೂಪದ ತ್ಯಾಜ್ಯ ಹೊರ ಬರುತ್ತಿದ್ದು ಇವುಗಳ ಸಮುದಾಯದ ಆರೋಗ್ಯಕ್ಕೆ ಸಂಬಂಧಪಟ್ಟಂತೆ ಅತ್ಯಂತ ಅಪಾಯಕಾರಿ ದ್ರವ ತ್ಯಾಜ್ಯವಾಗಿರುತ್ತದೆ. ಶೌಚಾಲಯದಿಂದ ಹೊರಬರುವಂತಹ ದ್ರವ ತ್ಯಾಜ್ಯಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡಬೇಕಾದರೆ ಶೌಚಾಲಯವನ್ನು ನಿರ್ಮಾಣ ಮಾಡುವುದು ಅತಿ ಅವಶ್ಯಕವಾಗಿರುತ್ತದೆ (4).




## ತ್ಯಾಜ್ಯ ವಸ್ತುಗಳ ಮೂಲ

ತ್ಯಾಜ್ಯ ಉತ್ಪತ್ತಿಯಾಗುವ ಸ್ಥಳವನ್ನು ತ್ಯಾಜ್ಯ ವಸ್ತುಗಳ ಮೂಲ ಎನ್ನಬಹುದು ತ್ಯಾಜ್ಯ ವಸ್ತುಗಳ ನಿರ್ವಾಹಣೆಗೆ ಯೋಜನೆಯನ್ನು ತಾಯಾರಿಸುವ ಮೊದಲು ತ್ಯಾಜ್ಯ ವಸ್ತುಗಳ ಮೂಲ ತಿಳಿದುಕೊಳ್ಳುವುದು ಅವಶ್ಯವಾಗಿರುತ್ತದೆ. ನಂತರ ಸಾಧ್ಯವಾದಷ್ಟು ಮೂಲದಲ್ಲಿಯೇ ತ್ಯಾಜ್ಯ ನಿರ್ವಹಣೆ ಮಾಡಲು ಪ್ರಯತ್ನ ಮಾಡಬೇಕಾಗಿರುತ್ತದೆ.




## ತ್ಯಾಜ್ಯ ವಸ್ತುಗಳ ವಿಂಗಡನೆ

ತ್ಯಾಜ್ಯ ವಸ್ತುಗಳ ನಿರ್ವಹಣೆಗೆ ಮೊದಲು ತ್ಯಾಜ್ಯ ವಸ್ತುಗಳ ವಿಂಗಡನೆ ಮಾಡುವುದು ಅವಶ್ಯಕವಾಗಿರುತ್ತದೆ. ನಂತರ ತ್ಯಾಜ್ಯಗಳನ್ನು ಕೊಳೆಯುವ ಮತ್ತು ಕೊಳೆಯದಿರುವ ತ್ಯಾಜ್ಯಗಳನ್ನಾಗಿ ವಿಂಗಡಣೆ ಮಾಡಿ ಸಾಧ್ಯವಾದಷ್ಟು ವೈಯಕ್ತಿಕ ಮಟ್ಟದಲ್ಲಿಯೇ ನಿರ್ವಹಣೆ ಮಾಡುವ ಬಗ್ಗೆ ಯೋಜನೆ ತಯಾರಿಸುವುದು ಸೂಕ್ತವಾಗಿದೆ

## ಸಮುದಾಯ ಮಟ್ಟದಲ್ಲಿ ಗೊಬ್ಬರ ಮತ್ತು ಎರೆಹುಳು ಗೊಬ್ಬರ ಹಾಗೂ ಜೈವಿಕ ಅನಿಲ ತಯಾರಿಕೆ ಘಟಕ ಸ್ಥಾಪನೆ

ಕೊಳೆಯುವ ವಸ್ತುಗಳಾದ ಅಡುಗೆ ಮನೆ ತ್ಯಾಜ್ಯ, ಸೆಗಣಿ ತ್ಯಾಜ್ಯ, ಮಾರುಕಟ್ಟೆ ತ್ಯಾಜ್ಯ, ಶಾಲೆ ಮತ್ತು ಅಂಗನವಾಡಿ ತ್ಯಾಜ್ಯ ಮುಂತಾದವುಗಳನ್ನು ಗೊಬ್ಬರವನ್ನಾಗಿ ಹಾಗೂ ಎರೆಹುಳು ಗೊಬ್ಬರವನ್ನಾಗಿ ತಯಾರಿಸಬಹುದಾಗಿದೆ ಹಾಗೂ ಸಮುದಾಯ ಮಟ್ಟದಲ್ಲಿ ತ್ಯಾಜ್ಯಗಳನ್ನು ವಿಂಗಡನೆ ಮಾಡಿ ನಂತರ ಕೊಳೆಯುವ ತ್ಯಾಜ್ಯಗಳನ್ನು ಜೈವಿಕ ಅನಿಲ ತಯಾರಿಕೆಯ ಘಟಕವನ್ನಾಗಿ ಮಾಡಬಹುದಾಗಿದೆ.

## ಪುನರ್ ಬಳಕೆ

ಕೊಳೆಯದಿರುವ ತ್ಯಾಜ್ಯಗಳಾದ ಪ್ಲಾಸ್ಟಿಕ್, ಗಾಜು, ಇತರೇ ವಸ್ತುಗಳು ಭೂಮಿಯಲ್ಲಿ ಸುಲಭವಾಗಿ ಕೊಳೆಯುವುದಿಲ್ಲಾ ಆದುದರಿಂದ ಇಂತಹ ವಸ್ತುಗಳನ್ನು ಸಾಧ್ಯವಾದಷ್ಟು ಪುನರ್ ಬಳಕೆ ಘಟಕಗಳಿಗೆ ಕಳುಹಿಸಿ ಪುನರ್ ಬಳಕೆ ಮಾಡುವುದು ಅವಶ್ಯಕತೆ ಇರುತ್ತದೆ.

## ಗುಂಡಿಯಲ್ಲಿ ಮುಚ್ಚುವುದು

ಗುಂಡಿಗಳನ್ನು ತೋಡಿ ತ್ಯಾಜ್ಯಗಳನ್ನು ಭೂಮಿಯಲ್ಲಿ ಹಾಕಿ ಮುಚ್ಚಬಹುದಾಗಿದೆ. ನಂತರ ಯಾವುದೇ ರೀತಿಯ ಪ್ರಾಣಿಗಳು ಹಾಗೂ ಪಕ್ಷಿಗಳು ಬಾರದಂತೆ ಗುಂಡಿಯನ್ನು ಪುನಃ ಮಣ್ಣಿನಿಂದ ಮುಚ್ಚಬೇಕಾಗುತ್ತದೆ ಅಥವಾ ಇತರೆ ಸೂಕ್ತ ಕ್ರಮಗಳನ್ನು ವಹಿಸಬೇಕಾಗಿತ್ತದೆ.

## ಸುಡುವುದು – ಇನ್‌ಸಿನರೇಟರ್

ಕೊಳೆಯದಿರುವ ತ್ಯಾಜ್ಯಗಳಾದ 20 ಮೈಕ್ರಾನ್ ಗಿಂತ ಕಡಿಮೆ ದಪ್ಪ ಇರುವ ಪ್ಲಾಸ್ಟಿಕ್ ತ್ಯಾಜ್ಯವನ್ನು ಯಾವುದೇ ರೀತಿಯಲ್ಲಿ ಪುನರ್ ಬಳಕೆ ಮಾಡಲು ಸಾಧ್ಯವಿರುವುದಿಲ್ಲ ಆದುದರಿಂದ ಇಂತಹ ಪ್ಲಾಸ್ಟಿಕ್ ತ್ಯಾಜ್ಯ, ಆಸ್ಪತ್ರೆ ತ್ಯಾಜ್ಯ ಹಾಗೂ ಇತರೆ ಅಪಾಯಕಾರಿ ತ್ಯಾಜ್ಯಗಳನ್ನು ಇನ್‌ಸಿನರೇಟರ್ ಮುಖಾಂತರ ಸುಡುವುದು ಅವಶ್ಯಕವಾಗಿರುತ್ತದೆ. ಈ ತ್ಯಾಜ್ಯಗಳನ್ನು ಸುಡುವ ಘಟಕವು ಜನನಿಬಿಡ ಪ್ರದೇಶದಿಂದ ದೂರ ಇರಬೇಕು. ಇನ್‌ಸಿನರೇಟರ್ ಪದ್ಧತಿಯನ್ನು ತ್ಯಾಜ್ಯ ವಸ್ತುಗಳ ನಿರ್ವಹಣೆಯಲ್ಲಿ ಕಡೆಯ ಆಯ್ಕೆಯನ್ನಾಗಿ ಇಟ್ಟುಕೊಳ್ಳುವುದು ಒಳ್ಳೆಯದು ಯಾಕೆಂದರೆ ತ್ಯಾಜ್ಯವನ್ನು ಸುಡುವುದರಿಂದ ವಾಯು ಮಾಲಿನ್ಯವಾಗುವ ಸಾಧ್ಯತೆಗಳು ಹೆಚ್ಚಾಗಿರುತ್ತದೆ.



ಹಾವೇರಿ ಜಿಲ್ಲೆಯ ಹಾವನೂರು ಗ್ರಾಮ ದಿನಾಂಕ : 18.11.2011 & 19.11.2011

# ಮೂಲ


1. Registrar General and Census Commissioner, Government of India, Census 2011, accessed 2013 march 7 available from : http://www.censusindia.gov.in/2011census/hlo/District_Tables/HLO_Distt_Table_karnataka.html

2. Ministry of Drinking Water and sanitation, Rajiv Gandhi National Drinking water Mission, July 2012, guidelines for "***NIRMAL BHARATH ABHIYAN***" Government of India.

3. Uno Winblad and Mayling Simpson – Hebert 2004, ***"ECOLOGICAL SANITATION",*** Stockholm Environmental Institute - Sweden

4. UNICEF, Government of India "***Solid and Liquid Waste Management in Rural Areas –A Technical Note"*** UNICEF

5. Adithya Pradyumna and Ravi Narayan july 2012, "***EXAMINING ENVIRONMENT AND HEALTH INTERACTIONS" Responding with Communities to the Challenges of Our Times,*** Bangalore, A SOCHARA – SOPHEA Publication

6. SOCHARA, 2011 ***"Celebrating Twenty Years of Community Health Journeys and Public Health Action 1991-2011"*** , Bangalore, SOCHARA 2011

7. SOCHARA September 2011 , ***" A Journey of a Thousand Lives : Building Community Health Through Fellowships"*** Bangalore, The Community Health Cell 2011

8. Government of Karnataka Task Force on Health and Family Welfare, April 2000, ***"Towards Equity, Quality and Integrity in Health"*** Bangalore Government of Karnataka

9. Kamal Kar with Robert Chambers, march 2008 "***Handbook on Community- Led Total Sanitation"*** *Plan International (UK).*

10. Ravi Narayan, Thelma Narayan, K.Gopinathan, Krishna Chakravarthy, first printed in 1987 and Revised in 2011 "***COMMUNITY HEALTH in search of alternative process – Report of a Study- Reflection-Action-Experiment",*** Bangalore, Community Health Cell.

# ಪರಿಸರ ಸ್ವಚ್ಛತೆ ಬಗ್ಗೆ SOCHARA ಸಂಸ್ಥೆಯ ಜೊತೆಗೂಡಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳು

**SOCHARA** ಸಂಸ್ಥೆ, ಬೆಂಗಳೂರು

ಹೆಡ್ ಸ್ಟ್ರೀಮ್ಸ್ ಸಂಸ್ಥೆ, ಬಾಗಲಕೋಟೆ

ನವಜೀವನ ಮಹಿಳಾ ಒಕ್ಕೂಟ ಮತ್ತು ಜಾಗೃತ ಮಹಿಳಾ ಸಂಘಟನೆ, ರಾಯಚೂರು

ಜಾಗೃತಿ ಸಂಸ್ಥೆ, ಬೆಳಗಾವಿ ಮತ್ತು ಧಾರವಾಡ

ಸಖಿ ಸಂಸ್ಥೆ, ಬಳ್ಳಾರಿ

ತಮಟೆ ಸಂಸ್ಥೆ, ತುಮಕೂರು

ಗ್ರಾಮೀಣ ಮಹಿಳಾ ಒಕ್ಕೂಟ, ಕೋಲಾರ

ನಿರ್ಮಾಣ ಸಂಸ್ಥೆ, ಹಾವೇರಿ

ಸೃಜನ ಮಹಿಳಾ ಸಂಘಟನೆ, ಚಿಕ್ಕನಾಯಕನಹಳ್ಳಿ, ತುಮಕೂರು

## ಕೊನೆ ಮಾತು

ಸುರಕ್ಷಿತ ಕುಡಿಯುವ ನೀರು, ಉತ್ತಮ ಆರೋಗ್ಯ ಮತ್ತು ಪರಿಸರ ನೈರ್ಮಲ್ಯವು ಒಂದಕ್ಕೊಂದು ಸಂಬಂಧ ಹೊಂದಿರುತ್ತವೆ. ಸುರಕ್ಷಿತ ಕುಡಿಯುವ ನೀರು ಮತ್ತು ನಮ್ಮ ಪರಿಸರ ಸ್ವಚ್ಛವಾಗಿರದಿದ್ದಲ್ಲಿ ಸಮುದಾಯವು ಅನೇಕ ರೋಗ ರುಜಿನಗಳಿಗೆ ತುತ್ತಾಗುತ್ತದೆ. ಪರಿಸರ ಸ್ವಚ್ಛತೆಯಲ್ಲಿ ಮುಖ್ಯವಾಗಿ ವೈಯಕ್ತಿಕ ಹಾಗೂ ನಮ್ಮ ಸುತ್ತಮುತ್ತಲಿನ ಪರಿಸರ ಶುಚಿತ್ವದ ಅಂಶಗಳು ಕಾಣಸಿಗುತ್ತವೆ. ಗ್ರಾಮೀಣ ಪರಿಸರದ ಶುಚಿತ್ವವು ಬಯಲಲ್ಲಿ ಬಿದ್ದ ಮಲದ ಮೇಲೆ ಸಹ ಅವಲಂಬಿತವಾಗಿರುತ್ತವೆ. ಮನುಷ್ಯನ ಉಗಮವಾದಾಗಿನಿಂದ ಇಲ್ಲಿಯವರಗೆ ಹೆಚ್ಚಿನ ಗ್ರಾಮೀಣ ಸಮುದಾಯವು ಮಲ ವಿಸರ್ಜನೆಗೆ ಬಯಲನ್ನು ಆಶ್ರಯಿಸಿರುವುದು ಕಂಡುಬಂದಿರುತ್ತದೆ. ಬಯಲು ಮಲ ವಿಸರ್ಜನೆಯನ್ನು ತಡೆಗಟ್ಟಲು ಸರಕಾರ ಹಾಗೂ ಸರಕಾರೇತರ ಸಂಸ್ಥೆಗಳ ಹಲವಾರು ವರ್ಷಗಳ ಪ್ರಯತ್ನದ ಫಲವಾಗಿ ಸಾಕಷ್ಟು ಯೋಜನೆಗಳು ಜಾರಿಗೆ ಬಂದಿದ್ದರು ಸಹ ಬಯಲು ಮಲ ವಿಸರ್ಜನೆ ಪದ್ಧತಿಯು ಕಡಿಮೆಯಾಗಿರುವುದಿಲ್ಲಾ. ಈ ನಿಟ್ಟಿನಲ್ಲಿ ಬಯಲು ಮಲ ವಿಸರ್ಜನೆಯನ್ನು ತಡೆಗಟ್ಟಲು ಶೌಚಾಲಯವನ್ನು ನಿರ್ಮಾಣ ಮಾಡುವುದು ಮಾತ್ರವಲ್ಲದೆ ಸುಸ್ಥಿರತೆ ಕಾಪಾಡಲು ಸಮುದಾಯಕ್ಕೆ ಆರೋಗ್ಯ ಶಿಕ್ಷಣ, ಸೂಕ್ತ ರೀತಿಯಲ್ಲಿ ತ್ಯಾಜ್ಯ ವಸ್ತುಗಳ ನಿರ್ವಹಣೆ, ಕಡಿಮೆ ವೆಚ್ಚದ ಶೌಚಾಲಯಗಳ ನಿರ್ಮಾಣ, ಸರಕಾರಿ ಯೋಜನೆಗಳ ಹಾಗೂ ನೈರ್ಮಲ್ಯಕ್ಕೆ ಸಂಬಂಧ ಪಟ್ಟ ಇತರೇ ವಿಷಯಗಳ ಬಗ್ಗೆ ತಿಳುವಳಿಕೆ ನೀಡುವುದು ಅವಶ್ಯಕವಾಗಿದೆ. ಈ ಕೈಪಿಡಿಯಲ್ಲಿ ಅರೋಗ್ಯ ಕಾರ್ಯಕರ್ತರು, ಸಮುದಾಯದವರು, ವಿದ್ಯಾರ್ಥಿಗಳು ಹಾಗೂ ಇತರರು ಪರಿಸರ ಸ್ವಚ್ಛತೆಯ ಬಗ್ಗೆ ತಿಳಿದುಕೊಳ್ಳಬೇಕಾದ ಅಂಶಗಳ ಬಗ್ಗೆ ಸರಳ ರೀತಿಯಲ್ಲಿ ವಿವರಣೆ ನೀಡಲಾಗಿದೆ.

ಶ್ರೀ ಐ.ಎಂ. ಪ್ರಹ್ಲಾದ್

### ಹೆಚ್ಚಿನ ಮಾಹಿತಿಗೆ


**SOCHARA**

**(Society for Community Health Awareness, Research and Action)**

ನಂ.359, "ಶ್ರೀನಿವಾಸ ನಿಲಯ", 1 ನೇ ಹಂತ, 1 ನೇ ಬ್ಲಾಕ್, ಕೋರಮಂಗಲ, ಬೆಂಗಳೂರು – 560 034

ದೂರವಾಣಿ : – 080–25630934/41280009

E-mail :- cphe@sochara.org & chc@sochara.org

website : www.sochara.org


sochara
building community health

Designed & Printed at Aksharaprinters Ph. : 080-26624082, 26624897